ಎಂದು ಹೇಳಿ ಅಧಿಕಾರ ಕೊಟ್ಟಿರುವುದರಿಂದ ಆ ಅಧಿಕಾರಿಗಳು ಎಲ್ಲರೂ ಮನೆಗೆ ಮುತ್ತಿಗೆ ಹಾಕಿ ಎಲ್ಲಿಗೆ ಬೇಕಾದರೂ ಹೋಗಿ ಲೂಟಿ ಮಾಡಿ, ಅತ್ಯಾಚಾರ ಮಾಡುತ್ತಾರೆ ಎಂದು ಅಪ್ರಹೆಂಡ್ ಮಾಡು

ವುದಕ್ಕಾಗುವುದಿಲ್ಲ. ಅವರೂ ಸಹ ಮನುಷ್ಯರು, ಮನುಷ್ಯರಲ್ಲಿ ಒಳ್ಳೆಯವರೂ ಇರುತ್ತಾರೆ, ಕೆಟ್ಟವರೂ ಇರುತ್ತಾರೆ. ಒಂದು ಊರಿನಲ್ಲಿ ಈ ಅಧಿಕಾರಿಗೆ ಆಗದವರು ಯಾರಾದರೂ ಒಬ್ಬರು ಇದ್ದರೆ ಆತನಿಗೆ ತಾವು ಇಲ್ಲಿ ಕೊಟ್ಟಿರುವಷ್ಟು ಅಧಿಕಾರದಿಂದ ಅವರು ಎಷ್ಟರಮಟ್ಟಿನ ಕಿರುಕುಳ ಕೊಡಬಹುದು ಎಂಬುದನ್ನು ತಾವೇ ಊಹಿಸಬಹುದು. ಹೀಗಿರುವುದರಿಂದ ಕಾನೂನು ಮಾಡುವಾಗ ಯಾರು ಆ ಕಾನೂನನ್ನು ಎಕ್ಸಿಕೂಟ್ ಮಾಡುತ್ತಾರೋ ಅವರ ಮೇಲೆ ಎಲ್ಲರ ಮೇಲೂ ನಿಗಾ ಇಟ್ಟಿರುವುದಕ್ಕೆ ಆಗುವುದಿಲ್ಲ. ಕಾನೂನಿಗನುಸಾರವಾಗಿ ಅಕ್ಷರಶಃ ಅದನ್ನು ಅನುಸರಿಸಿದ್ದಾನೆಯೇ ಅಥವಾ ಹೊರಗೂ ಒಳಗೂ ಹೋಗಿ ಅಧಿಕಾರ ಚಲಾಯಿಸಿದ್ದಾನೆಯೋ ಎಂದು ಯಾರೂ ನೋಡುತ್ತಾ ಕುಳಿತುಕೊಳ್ಳುವುದಿಲ್ಲ. ಆದುದರಿಂದ ಅನ್ಯಾಯವಾಗಿ ಒಬ್ಬನಿಗೆ ಯಾವುದೇ ರೀತಿಯಾಗಿ ಮಾನಕ್ಕಾಗಲೀ, ಆಸ್ತಿಗಾಗಲೀ, ಪ್ರಾಣಕ್ಕಾಗಲಿ ಧಕ್ಕೆ ಆಗದ ರೀತಿಯಲ್ಲಿ ಕಾನೂನನ್ನು ರಚಿಸಬೇಕು. ಸರ್ಕಾರದವರು ಹೇಳಬಹುದು, ಏನೂ ಪವರ್ ಇಲ್ಲದೇ ಹೋದರೆ ಈಗ ಯಾವ ರೀತಿ ಲಕ್ಷಾಂತರ ರೂಪಾಯಿ ಬಾಕಿ ನಿಂತಿದೆಯೋ ಅದೇ ರೀತಿ ಬಾಕಿ ನಿಂತು ಹೋಗುತ್ತದೆ, ಬಾಕಿ ಕೊಡುವುದಿಲ್ಲ, ಅದರ ಮೇಲೆ ಸುಳ್ಳು ಲೆಕ್ಕ ಕೊಡುತ್ತಾರೆ, ಲೆಕ್ಕ ಒದಗಿಸುವುದೇ ಇಲ್ಲ ಹೀಗೆಲ್ಲಾ ಕಾರಣಗಳನ್ನು ಕೊಡುತ್ತಾರೆ. ಆದರೆ ಈ ಕಾರಣಗಳನ್ನು ಕೊಟ್ಟ ಮಾತ್ರಕ್ಕೆ ಇಷ್ಟುಮಟ್ಟಿನ ಒಂದು ಅಧಿಕಾರವನ್ನು ಕೊಡತಕ್ಕದ್ದು ಕಾನೂನು ನಡೆಯತಕ್ಕ ದೃಷ್ಟಿಯಿಂದ ನೂಕ್ತವಲ್ಲ ಎಂದು ಮಾತ್ರ ನಾನು ಹೇಳಬೇಕಾಗಿದೆ.

ಸ್ಯಾಮಿ, ಈ ಟ್ಯಾಕ್ಸು ರಿಗ್ರೆಸೀವ್ ಎನ್ನುವುದಕ್ಕೆ ಒಂದು ವಾಕ್ಯ ಓದುತ್ತೇನೆ :

> "It is the fundamental weakness of Sales-Tax that it cannot make allowance for domestic circumstances and indeed that it tends to fall more heavily as between the tax-payers of equal income on those who have largest number of dependents."

ಇದು ನಿಜವಾಗಿಯೂ ಒಂದು ಕ್ಲಿಷ್ಟವಾದ ತೆರಿಗೆಯೇ. ಈಗ ನಮ್ಮ ದೇಶದಲ್ಲಿ ಅನೇಕ ಪ್ರಾಂತ್ಯಗಳು ಇದನ್ನು ಇಟ್ಟುಕೊಂಡು ಬಂದಿವೆ. ಹೊರಗಡೆ ದೇಶಗಳಲ್ಲೂ ಇದನ್ನು ಅನುಸರಿಸುತ್ತಿದ್ದಾರೆ ಎನ್ನುವ ಕಾರಣಕ್ಕಾಗಿಯೇ ಇದನ್ನು ಇಟ್ಟುಕೊಳ್ಳಬೇಕು, ಇದು ಒಂದು ಕಾಮಧೇನು ಆಗಿದೆ ಎಂಬ ವಾದದಲ್ಲಿ ಏನೂ ಅರ್ಥವಿಲ್ಲ. ಆದರೆ ಇದು ಯಾವರೀತಿ ಒಂದು ಕಿರುಕುಳದ ತೆರಿಗೆ ಎಂಬುದಾಗಿ ನಾವುಕರಣವಾಗಿದ್ದು, ಹೇಗೆ ಕಿರುಕುಳ ಕೊಡುತ್ತದೆ ಎಂಬುದನ್ನು ನಾವು ನೋಡಬೇಕಾಗಿದೆ. ಅನೇಕವೇಳೆ ಇದರ ಪರಿಣಾಮವನ್ನು ತಡೆಗಟ್ಟುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಈಗ ಒಬ್ಬನಿಗೆ 10 ಸಾವಿರ ರೂಪಾಯಿ ವ್ಯಾಪಾರ ಆಗುತ್ತದೆ. ಅವನ ಮನೆಯಲ್ಲಿ ಅವನು ಒಬ್ಬನೇ ಇರುತ್ತಾನೆ. ಅದೇ ಇನ್ನೊಬ್ಬನಿಗೂ 10 ಸಾವಿರ ರೂಪಾಯಿ ವ್ಯಾಪಾರ ಆಗುತ್ತದೆ. ಆದರೆ ಅವನ ಮನೆಯಲ್ಲಿ ಹತ್ತು, ಹನ್ನೆರಡು ಜನ ಇರುತ್ತಾರೆ. ಹೀಗಿರುವಾಗ ಕಡಮೆ ಜನ ಇರುವವರಿಗೆ ಜಾಸ್ತಿ ತೆರಿಗೆ, ಜಾಸ್ತಿ ಜನ ಇರುವವರಿಗೆ ಕಡಿಮೆ ತೆರಿಗೆ ಎಂದು ಹೇಳಿ ಪ್ರಾವಿಜ್ ಮಾಡುವುದಕ್ಕಾಗುವುದಿಲ್ಲ. ಅಂತೂ ಪರಿಣಾಮದಲ್ಲಿ ದೊಡ್ಡ ಸಂಸಾರದವನು ವರ್ಷೇವರ್ಷೇ ಖರ್ಚು ಹೆಚ್ಚಾಗಿ ಬಡತನಕ್ಕೆ ಗುರಿಯಾಗುತ್ತಾನೆ. ಸಣ್ಣ ಸಂಸಾರದವನು ಖರ್ಚು ಕಡಮೆ ಇದ್ದು ಉದ್ಧಾರವಾಗುತ್ತಾನೆ. ಈ ದೃಷ್ಟಿಯಿಂದಲೂ ಕೂಡ ಈ ಸೇಲ್ಸ್ ಟ್ಯಾಕ್ಸ್‌ನಲ್ಲಿ ಮತ್ತೊಂದು ದೊಡ್ಡ ನ್ಯೂನತೆ ಇದೆ :

> "Nor is it possible to expect the very elaborate differentiation to the rates of tax on various commodities to make sales-tax progressive as between different tax-payers of unequal incomes. It would probably be necessary for these purposes to extend the scope of the tax to cover the sale of personal services and this would greatly increase its administrative difficulties. A practicable sales-tax tends almost inevitably to be regressive."

ಇದು ರಿಗ್ರೆಸೀವ್ ಅನ್ನುವ ವಿಷಯ.

ಶ್ರೀ ಕಡಿದಾಳ್ ಮಂಜಪ್ಪ.—ಸೇಲ್ಸ್ ಟ್ಯಾಕ್ಸ್ ಹಾಕುವುದು ಬೇಡ ಎಂದು ಹೇಳಿದ್ದಾನೆಯೇ ಅವನು ?

ಶ್ರೀ ಎಸ್. ಗೋಪಾಲಗೌಡ.—ತಾವು ಏನೇ ಬದಲಾವಣೆ ಮಾಡಿ, ಸ್ಲ್ಯಾಬ್ ರೇಟ್ ಆಗಲೀ, ಮಲ್ಟಿ ಪಾಯಿಂಟ್ ಆಗಲಿ, ಸಿಂಗಲ್ ಪಾಯಿಂಟ್ ಆಗಲಿ ಪರಿಣಾಮದಲ್ಲಿ ಅದು ಯಾವರೀತಿ ಕಿರುಕುಳ ಉಂಟು ಮಾಡುತ್ತನೆ ಮತ್ತು ಯಾವರೀತಿ ಅದರಲ್ಲಿ ಒಂದು ಸಮಾನ ಆದಾಯ ಇರತಕ್ಕವರಮೇಲೆ ಅಥವಾ ಶ್ರೀಮಂತರು, ಬಡವರು ಎಂಬ ತಾರತಮ್ಯದಮೇಲೆ ಕೆಲಸಮಾಡುತ್ತದೆ ಎನ್ನುವುದನ್ನು ನೋಡಿದರೆ ಇದು ಸರಿಯಾದ ಒಂದು ತೆರಿಗೆ ಆಗುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಒಂದು ಮನೆಯಲ್ಲಿ 10 ಜನ ಇದ್ದು 5 ಎಕರೆ ಜಮೀನಿರುತ್ತದೆ. ಇನ್ನೊಂದು ಮನೆಯಲ್ಲಿ ಒಬ್ಬನೇ ಇದ್ದು 5 ಎಕರೆ ಜಮೀನು ಇರುತ್ತದೆ. ಅಂಥಾ ಸಂದರ್ಭದಲ್ಲಿ ಜಮೀನು ಕಂದಾಯ ಯಾವರೀತಿ ಹಾಕುತ್ತೀರಿ ? ಜಾಸ್ತಿ ಜನ ಇದ್ದರೆ ಕಡಮೆ ಕಂದಾಯ, ಕಡಮೆ ಜನ ಇದ್ದರೆ ಜಾಸ್ತಿ ಕಂದಾಯ ಹಾಕುತ್ತೀರೋ ? ಇಲ್ಲ, ಒಂದೇ ತರಹ ಕಂದಾಯ ಹಾಕುತ್ತೀರೋ ? ಅದಲ್ಲದೇ ತಮ್ಮ ಸಿಸ್ಟಂ ಬೇರೆ ಯಾವುದಾದರೂ ಇದೆಯೋ ?

ಶ್ರೀ ಎಸ್. ಗೋಪಾಲಗೌಡ —ನಮ್ಮ ಸಿಸ್ಟಂನಲ್ಲಿ ಏಕರೇಜನ್ನೇ ಹೆಚ್ಚು ಕಮ್ಮಿ ಮಾಡುತ್ತಾರೆ. ಆಯಾಯಾ ಸಂಸಾರದಲ್ಲಿರತಕ್ಕ ವ್ಯಕ್ತಿಗಳ ಸಂಖ್ಯೆಗನುಸಾರವಾಗಿ ಹಿಡುವಳಿ ವಿಸ್ತೀರ್ಣ ಹೆಚ್ಚು, ಕಮ್ಮಿ ಮಾಡುತ್ತಾರೆ. ಈಗ ಮಾರಾಟದ ತೆರಿಗೆ ಹೇಗಿದ್ದರೂ ಇರುವುದಕ್ಕೆ ಬಂದಿದೆ. ಹೋಗುವುದಕ್ಕೆ ಬಂದಿಲ್ಲ. ಅದನ್ನು ತೆಗೆಯುವುದರಿಂದ ಸರ್ಕಾರದ ಆದಾಯ ಪೆಚ್ಚಿವನ್ನೂ ಸರಿತೂಗಿಸುವುದಕ್ಕಾಗುವುದಿಲ್ಲ. ಆದ್ದರಿಂದ ಸಾಧ್ಯವಾದ ಮಟ್ಟಿಗೂ ಇದರಲ್ಲಿ ಎಲ್ಲೆಲ್ಲಿ ನ್ಯೂನತೆಗಳು ಇವೆ ಎಂದು ಹೇಳಬಹುದೋ ಅಂಥವುಗಳನ್ನೂ ಸ್ವಲ್ಪ ತಿದ್ದುಪಡಿ ಮಾಡಿ ತರಬೇಕು ಎನ್ನುವುದೇ ಸರ್ಕಾರದ ಉದ್ದೇಶವಾಗಿದೆ ಎಂದು ಹೇಳಿ ಈಗಾಗಲೇ ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಈ ತಿದ್ದುಪಡಿಯನ್ನು ಮಾಡುವಾಗ ಹೋಟಲುಗಳಮೇಲೆ ಯಾವ ಒಂದು 10 per cent levy ಹಾಕಬೇಕೆಂದು ಇದ್ದೀರಿ, ಅದು ಬಹಳ ಅನ್ಯಾಯದ ತೆರಿಗೆ ಆಗುತ್ತದೆ. ಇದರಿಂದ ಪೇಟೆಗಳಲ್ಲಿ

(ಶ್ರೀ ಎಸ್. ಗೋಪಾಲಗೌಡ.)

ಮಾತ್ರವಲ್ಲ, ಹಳ್ಳಿಗಳಲ್ಲೂ ಕೂಡ—ಹಳ್ಳಿ ಎಂದರೆ ತೀರ ಹಳ್ಳಿಯಲ್ಲ, ತಾಲ್ಲೂಕು ಹೆಡ್‌ಕ್ವಾರ್ಟರುಗಳು ಇತ್ಯಾದಿ ಕಡೆಗಳಲ್ಲಿ ಇರತಕ್ಕ ಅನೇಕ ಹೋಟಲುಗಳವರು ತಮ್ಮ ತಮ್ಮ ಹೋಟಲುಗಳನ್ನು ಮುಚ್ಚಬೇಕಾಗುತ್ತದೆ ಎಂಬುದನ್ನು ಕೂಡ ನಾವು ಗಮನಿಸಬೇಕಾಗಿದೆ. ಇದು ಒಂದು ದೊಡ್ಡ ವ್ಯಾಪಾರ ಆಗಿ ಇದರಲ್ಲಿ 100ಕ್ಕೆ 100 ಲಾಭ ಬರುತ್ತದೆ, ತೆರಿಗೆ ಹಾಕಬಹುದು ಎಂಬ ವಾದ ಇದ್ದರೂ ಕೂಡ ಅವರು ಶಿಬ್ಬಂದಿಗೆ ಖರ್ಚು ಮಾಡುವುದಕ್ಕಾಗಲೀ, ಅವರು ಕೊಡತಕ್ಕ ಬೇರೆ ತೆರಿಗೆ ಗಳಿಗಾಗಲೀ ಇದರಲ್ಲಿ ಯಾವುದೇ ರೀತಿಯ ವಿನಾಯಿತಿ ಯನ್ನೂ ಕೊಟ್ಟಿಲ್ಲ. ಆದ್ದರಿಂದ ಈ ತೆರಿಗೆ ಒಂದು ವೇಳೆ ಸಾವಿರಾರು ಜನ ಕೆಲಸಗಾರರಿದ್ದರೆ ಅವರ ಮೇಲೂ ಪರಿಣಾಮವನ್ನುಂಟುಮಾಡಬಹುದು. ಇದೇ ರೀತಿ ಇನ್ನೂ ಅನೇಕ ವಿಷಯಗಳಮೇಲೆ ಇದರ ಪರಿ ಣಾಮ ವ್ಯಾಪಿಸಬಹುದು. ಆದ್ದರಿಂದ ಇದನ್ನು ಪರಿ ಶೀಲನೆ ಮಾಡಬೇಕಾದ್ದು ಅಗತ್ಯವಾಗಿದೆ.

Sri A. BHEEMAPPA NAIK.—I want to ask one question through you, Sir.

Mr. SPEAKER.—The point is this. All these are side remarks; he will take necessarily more time than is required to answer. That is my difficulty. What was said by Sri Pattabhiraman, he has said in other words by reading one para in that book. After all what is it that he has stated? There was nothing wrong from his point of view.

Sri S. GOPALA GOWDA.—Thank you, Sir.

ಇನ್ನು power-looms ಎಂದು ಏನು ಹೇಳಿದ್ದಾರೆ, ಇದರಲ್ಲಿ ಯಾವುದು power-loom ಬಟ್ಟೆ, ಯಾವುದು ಪವರ್ ಲೂಮ್ ಬಟ್ಟೆ ಅಲ್ಲ ಎಂಬ ವ್ಯತ್ಯಾಸ ಕಂಡು ಹಿಡಿಯುವುದೇ ಕಷ್ಟವಾಗಿದೆ ಎಂಬ ಕಾರಣಕ್ಕಾಗಿ ಇದರಮೇಲೆ ನೀವು 2 ಆಣೆ ತೆರಿಗೆ ಹಾಕಬೇಕೆಂಬುದು ನ್ಯಾಯವಾಗುವುದಿಲ್ಲ. ಪವರ್ ಉಪಯೋಗಿಸಿಕೊಂಡ ಮಾತ್ರಕ್ಕೇ ಆ ರೀತಿ ಹಾಕುವುದು ನ್ಯಾಯವಲ್ಲ. ಪವರ್ ಲೂಮ್ ತಾನಾಗಿ ತಾನೇ ನಡೆಯುವುದಿಲ್ಲ ಅಥವಾ ಉತ್ಪನ್ನ ಪವರ್ ಉಪಯೋಗಿಸಿಕೊಂಡ ಮಾತ್ರಕ್ಕೇ ಹೆಚ್ಚು ಪ್ರಮಾಣದಲ್ಲಿ ಆಗುವುದಿಲ್ಲ. ಇದರಲ್ಲೂ ಕೂಡ 2-3-4-5-6 ಲೂಮ್ಸ್ ಇಟ್ಟುಕೊಂಡು ಕೆಲಸ ಮಾಡತಕ್ಕವರು ತಮ್ಮ ಬಟ್ಟೆಯನ್ನು ತಾವೇ ಸ್ವತಃ ಹೇಟೆಗೆ ತೆಗೆದುಕೊಂಡುಹೋಗಿ ಮಾರಾಟ ಮಾಡಿ ತಮ್ಮ ಜೀವನವನ್ನು ನಡೆಸಿಕೊಂಡು ಹೋಗುತ್ತಾ ಇರುವವರು ಇದ್ದಾರೆ. ಇದು ಒಂದು ಜೀವನದ ಕಸುಬು ಆಗಿದೆ. ಆದ್ದರಿಂದ ಇನ್ನು ಮುಂದಾದರೂ ಈ ಪವರ್ ಲೂಮ್ಸ್‌ನ್ನು exempt ಮಾಡುವುದು ನ್ಯಾಯವಾಗಿದೆ. ಹ್ಯಾಂಡ್ ಲೂಮ್ಸ್‌ಗೆ ಯಾವರೀತಿ ಎಕ್ಸೆಂಮ್ಪ್ಷ ಮಾಡಿದ್ದೀರೋ ಅದೇರೀತಿ ಪವರ್ ಲೂಮ್ಸ್‌ಗೂ ಎಕ್ಸೆಂಮ್ಪ್ಷ ಮಾಡುವುದರಿಂದ ಅವರ ಆದಾಯಕ್ಕೆ ತೊಂದರೆಯುಂಟಾಗುವುದಿಲ್ಲ ಎಂದು ಹೇಳಿ ಸಲಹೆ ಮಾಡುತ್ತೇನೆ.

ಇನ್ನೂ ಈ ಪಟ್ಟಿಯಲ್ಲಿ ಬೀಡಿ, ಆಗರಬತ್ತಿ ಮುಂತಾದ ಕೆಲವು ಸಾಮಾನುಗಳನ್ನು ಸೇರಿಸಿದೆ. ಚಪ್ಪಲ್ಸ್ ಎನ್ನುವುದನ್ನು ಸೇರಿಸಿಲ್ಲ. ಅನೇಕವೇಳೆ ಚಪ್ಪಲ್ಸ್ ಯಾವುದು ಬೂಟ್ಸ್ ಯಾವುದು ಅಂತ ಕಂಡುಹಿಡಿಯುವುದಕ್ಕೆ ತೊಂದರೆಯಾಗುತ್ತದೆ. ಇದ ರಿಂದ ಏನಾಗುತ್ತದೆ ಎಂದರೆ ಪಟ್ಟಿ ಮಾಡುವಾಗ ಹೀಗೆ ನಣ್ಣ ನಣ್ಣ ವಸ್ತುಗಳನ್ನು ಬರೆದರೆ ನಾಳೆ ಅಸೆಸ್ ಮಾಡತಕ್ಕ ಅಧಿಕಾರಿಗಳಿಗೆ ಅವನ್ನು ಆ ಕಡೆ, ಈ ಕಡೆ ಸೇರಿಸುವಾಗ ಬಹಳ ಕಷ್ಟವಾಗುತ್ತದೆ. ತಾವು ಸ್ವಲ್ಪ ಸಾವಧಾನದಿಂದ ಪರಿಶೀಲನೆ ಮಾಡಿ ನೋಡಿದರೆ ಸಾಮಾನ್ಯವಾದ ಒಬ್ಬ ಅಂಗಡಿಕಾರ ಈ ಪಟ್ಟಿ ಇಟ್ಟುಕೊಂಡು ಯಾವ ಸಾಮಾನು ಸಿಂಗಲ್ ಪಾಯಂಟು, ಯಾವ ಸಾಮಾನು ಸೆಂಟ್ರಲ್ ಲಸ್ಟ್‌ನಲ್ಲಿ ಎಕ್ಸಂಮ್ಪ್ಷ ಆಗಿದೆ, ಯಾವ ಸಾಮಾನು ಮೈಸೂರು ಲಸ್ಟ್‌ನಲ್ಲಿ ಎಕ್ಸಂಮ್ಪ್ಷ ಆಗಿದೆ, ಯಾವ ಸಾಮಾನು ಸ್ಯಾಬ್ ಸಿನ್ಸ್‌ಂಗೆ ಬರುತ್ತದೆ ಎಂದು ಇಷ್ಟೆಲ್ಲಾ ವಿವರವಾದ ಲೆಕ್ಕ ಇಟ್ಟುಕೊಂಡು ಸೇಲ್ಸ್ ಟ್ಯಾಕ್ಸ್ ಆಫೀಸರಿಗೆ ಕೊಡಬೇಕಾಗುತ್ತದೆ.

ಆದ್ದರಿಂದ ಇದರಲ್ಲಿ ಸಾಮಾನ್ಯವಾಗಿ ಸಾಧ್ಯವಾದ ಮಟ್ಟಿಗೂ ಹೆಚ್ಚು ಜನ ವ್ಯಾಪಾರಸ್ಥರಿಗೆ ಕಿರುಕುಳ ಕೊಡಬಾರದೆಂಬುದೇ ತಮ್ಮ ಉದ್ದೇಶವಾಗಿದ್ದರೆ, ಲೆಕ್ಕಪಿಡುವುದು ಸುಲಭವಾಗಬೇಕೆಂದಿದ್ದರೆ, ಈ ಮಸೂದೆಯನ್ನು ಇನ್ನೂ ಸ್ವಲ್ಪ ತಿದ್ದುಪಡಿಮಾಡಿ ಈಗ ನಡೆದಿರುವ ಚರ್ಚೆಯನ್ನು ಗಮನಿಸಿ ಈ ತೆರಿಗೆ ಯನ್ನು ಅಧಿಕಾರಿಗಳು ನಂಗ್ರಹಿಸುವುದಕ್ಕೂ ಕೂಡ ಹೆಚ್ಚು ಅನುಕೂಲವಾಗುವ ರೀತಿಯಲ್ಲಿ ಮಾಡಿ, ಕೆಲ ವರೇನು ತಮ್ಮ ಮೇಲೆ ಹೆಚ್ಚು ಹೊರೆ ಬಿದ್ದಿದೆಯೆಂದು ಮನವಿಮಾಡಿಕೊಂಡಿದ್ದಾರೊ ಆ ಸಲಹೆಗಳನ್ನೂ ಅಂಗೀ ಕಾರಮಾಡಿ ಸರ್ಕಾರವನ್ನು ವಿರೋಧಿಸುವವರು ದೊಡ್ಡ ಚಳುವಳಿ ಮಾಡುವುದಕ್ಕೆ ಅವಕಾಶವಾಡದಂತೆ ಮಾಡಬಹುದಾದ ಎಲ್ಲಾ ತಿದ್ದುಪಾಟುಗಳನ್ನೂ ಮಾಡಿ ಹೊರೆಯನ್ನು ಕಡಮೆ ಮಾಡುತ್ತಾರೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

*Sri T. MARIAPPA (Mysore City North).—Mr. Speaker, Sir, it is not necessary for me now, at this late stage, to make a detailed examination of the amending Bill before the House. I was greatly surprised at the very vehement criticism that this unfortunate amending Bill evoked in this House. Sir, even the original Act, when it came before the House in the year 1948, did not encounter such an opposition. What exactly is the reason for such a stout opposition and merited criticism to this measure it is not necessary for me to say. Sir, I listened to with great interest to the very interesting arguments advanced by my Hon'ble friend Sri Pattabhiraman. I also heard with great advantage to myself, the simple, direct attack made on the Bill by my Hon'ble friend Sri Srinivasa Iyengar. Sir, certainly it is necessary for all of us to consider why this amending Bill has evoked such criticism. The reason is not far to seek. In the administration of the present Act the mercantile community had experienced a great deal of trouble and hardship and time and again they

were representing to the Government that they needed relief, not only relief in the matter of taxation, but they wanted also the removal of the defects and drawbacks. Sir, then a promise was held out to them that a committee would be appointed for examining the working of the Act with a view to see that these anomalies are removed, that the defects and drawbacks are removed and a suitable legislation would be brought forward which would not only give relief to the mercantile community but would be very simple in character in the matter of administration. I think, Sir, the Committee's concluding chapter is an answer, and a very effective answer, to that point. They say in Chapter XII :

> "It need not be reiterated that sales-tax has come to stay as a major item of revenue for the State. There is nothing inherently wrong in the levy of such a tax. It has only to be modelled in such a way that it will suit the mercantile usage without causing any undue hardship or inconvenience to the mercantile community."

Some radical and far-reaching changes in the present Act have been proposed by the Committee and they are—

"(*a*) bringing a large number of commodities under the single point system of taxation;

(*b*) introducing a slab system for all the commodities coming under the multi-point system;

(*c*) enlarging the list of exempted articles;

(*d*) constituting a Sales Tax Tribunal; and

(*e*) a Sales Tax Advisory Body."

Sir, you will be pleased to see that what was intended by the Committee was to give the much needed relief to the mercantile community and to suggest a usage without causing hardship, and the mercantile community would bring in the same revenue that the present Act was bringing to the coffers of the State. Sir, nobody would have any quarrel with the state of affairs, but what has been placed before the House is not a Bill embodying the suggestions and the recommendations of the Committee. Unfortunately, the Committee report has been ignored in vital particulars. On the other hand the amending Bill introduces such vital changes, which, unfortunately, evoked so much of opposition not only in this House but in the country. Sir, I was shocked when the dealer, when the commission agent, when the hotel keeper, when the manufacturer of agarbattis, the power-loom keeper and the confectioner, all came forward with deputations and representations against the provisions of this amending Bill. Sir, I believe, the merchant class was accustomed to the working of the present Act. It is true there were many defects in the working of the system of multi-point. There was lot of scope for evasion ; there was lot of scope for the Sales-tax officers to have unjust levy and harass the petty dealer. Sir, it must be admitted here that the honest merchant will have to suffer always. Therefore, with a view to see that these unjust harassments or unjust levy is removed and scope created to honest merchant to pay his share, the Committee was constituted and that is what the Committee says in Chapter XII, para 1. They say that they have undertaken this difficult task and have endeavoured after considerable enquiries and serious deliberations to suggest practical remedies for the several defects noticed in the present Act. Sir, my esteemed friend the Hon'ble Minister for Revenue who was the Chairman of this Committee has not indicated any difference of opinion whatever in the body of the report nor has he given a note of dissent. He must be congratulated for he has agreed to the suggestions of the Committee. On the committee learned members were there ; Sri Bheemappa Naik was there, Sri Mascarenhas, Sri Nagaraja Murthy, all these stalwarts were there. Sir, they would not allow Government revenue to escape. They have taken every precaution to see that the income from this source did not diminish. They have seen that as many articles as possible are brought under this. It is true that five articles have not been included. We

(Sri T. MARIAPPA.)

need not quarrel with the non-inclusion of the articles. The Committee have also gone further in response to the demand made by the mercantile community in as many cases as possible that it is better and safer to have one source of levy. Sir, they were practical men, they were amiable to the revenue of the State. Therefore, their suggestion is not merely theoretical but they are practical and try to safeguard the interest of not only the State's revenue but also the mercantile community, who are, at any rate, entitled to exist in the present stage of our society. Sir, in a democratic State we cannot kill the merchant class. They are a necessary part of our economic structure and we must tax them only to the extent that they are capable of paying. Sir, another argument was advanced that they are merely tax gatherers and they collect from the consumer. We forget one vital factor in this matter. If there is higher taxation, we are likely to divert trade from Mysore to outside. Therefore, the entire system of taxation must be in such a manner that not only it should be equitable but it should not unjustly affect the trade. With this principle in view, I believe, the Committee had made very good suggestions. It is true, as Sri Srinivasa Iyengar pointed out, that even the Committee's recommendations were more favourable to bigger merchants than to the smaller. Sir, in no scheme of taxation we can adopt full logic to all the provisions of the taxation. Here and there, it is bound to happen. While the amount of taxation suggested for a smaller merchant was Rs. 25 to 50, for a bigger merchant it gave some relief to the extent of Rs. 50. But they have gone to the other extreme of levying Rs. 75 to a merchant who was hitherto paying Rs. 150. Therefore, they were a bit generous to bigger merchants. The Committee has also taken care to see that in levying this single point levy, the imports recommended were not unnecessarily penalised. But in the amending Bill, where there was six pies levy, it has come as a surprise with two annas. When they recommended a slab of 100 to hotel keepers, the amending Bill, unfortunately, made a provision for 10 per cent levy not on the profits but on the turnover. Sir, it created terrible commotion not only in Bangalore and Mysore but throughout the State. Representations from the Hotel representatives came from all over the State and they held a conference. Such was the panic created in the minds of the hotel keepers. I am afraid, we must be responsive to the public demand and the Members of this House, I am sure, are always responsive to the public demand. In this connection I want to clear a misconception that is lingering in the mind of a few people. A rumour went round that the Congrees Party was responsible for this ten per cent. May I, Sir, dispel this doubt, that the Congress Party was not at all responsible for the levy of this ten per cent on the gross turnover of the hotel-keepers.

Sri S. SRINIVASA IYENGAR.—Sir, the Congress Party is in power.

Sri T. MARIAPPA.—Sir, it is the proposal of the Government. It is open to this House to look into the merits or demerits of it and bring it down. Therefore, let not the entire blame be thrown on the Congress Party.

5-30 P.M.

Sri Imam was very uncharitable. He remarked that we are 'His Master's Voice' and that we register our opinion merely at the behest of Government. It is not so. In fact you will be pleased to observe that the members on this side of the House are very reasonable. They examine each measure on its own merits and try to help the Government. The final proposals will certainly be modelled on the suggestions of the members of this House. Sir, what I have said now is further reinforced by the terms of reference to this committee. I believe my Hon'ble friends will certainly look into the question of augmenting the resources of the State if there were any terms of reference asking them to recommend how far the Government can go on increasing the taxes under this head. But the terms of reference were definite

with regard to this particular point. What the committee was asked to do was:

> "To examine the working of the Sales Tax Act and suggest remedies for defects, drawbacks and hardships, if any;
>
> To suggest further, alternative sources of income (except the abolition of prohibition, which is a matter of high policy) which may facilitate the repealing of the present Sales Tax Act."

These two terms of reference must be before the Government when they formulate ultimately the final form of the Bill. When a promise was held out, we must implement it to the best extent possible. It was not very difficult for the Government to bring a separate Bill asking for the approval of the House for an increase of the rate or for the addition of new commodities to this list. It was not at all difficult for them to have done it. But, when a committee is appointed, when it makes a recommendation, it is but right that the final Bill should be modelled on the final recommendations of the committee. It is true that in the Statement of Objects and Reasons the Government have said:

> "The Committee has suggested far reaching changes in the present Act which are calculated to minimise the hardships to the mercantile community. The main changes are:—
>
> (1) bringing a large number of commodities under the single point levy of taxation;
>
> (2) introducing a slab-system of taxation for all the commodities coming under the multi-point levy;
>
> (3) enlarging the list of exempted articles;
>
> (4) levy of interest at 6 1/4 per cent per annum on all belated payments of sales-tax;
>
> (5) authorising any officer empowered by Government to enter and search any place of business and to seize the necessary documents and registers.
>
> The Government accept in principle these recommendations of the committee....."

If that is so, perhaps there would not have been this much of criticism. But they added one word. They have accepted the recommendation with a modification. The whole trouble is due to that modification. I hope the criticisms that my friends have launched against the measure will go home and the Hon'ble Minister for Revenue who will be the Chairman of the Select Committee will give due weight to these criticisms and when the amending Bill emerges out of the select committee it will in all respects, I confidently hope, confine itself to the main recommendations of the committee. That is because these recommendations of the committee were in main to give relief, to remove all difficulties and drawbacks that we find in the working of the present Act. If the present Act is defective, defects have to be removed and a better measure is to be put forward. That is the very reason why this amending Bill has been criticised in such a severe fashion.

The next point I would like to touch upon very briefly is this. It is no doubt true that the committee also wanted the definition of the word 'dealer' to include 'commission agent.' There were representations that the commission agents should not be taxed on the turnover. The committee also have suggested the levy of a very light tax on this new set of dealers who have been brought within this definition. But my friend Sri Srinivasa Iyengar was arguing that retention of section does exempt commission agents. I do not think so. I think that it requires careful consideration at the hands of the select committee.

Another point which I would like to stress on this occasion is this. The proposed sales-tax on the turnover of hotels should be very carefully dealt with. The committee has suggested a tax which may bring nearly 3 lakhs of rupees per annum. I mean the slab rate suggested brings annually the present revenue. It works out to the existing rate. If for any reason there

(SRI T. MARIAPPA.)

is no possibility of improving the revenues, then the new sources must be thought of in such a manner that it should not kill the goose that lays the golden eggs. There is an impression going round in the country that hotel keepers make a lot of profit. But depression has already set in. These two years have indeed seen the closing down of some hotels. (*A Voice*: But new licences have been issued.) Therefore we must be very careful in finding out to what extent these hotel keepers should be taxed, to what extent the business of the hotel could be taxed. That is the reason why the committee have gone to another experiment suggesting a flat rate of Rs. 100. (*A Voice*: It is not an experiment.) On page 9 for example the committee have suggested that on dealers with a turnover of Rs. 7,500 and more and up to Rs. 10,000 a slab rate of Rs. 25 per annum may be levied, while here in this case the Government have suggested levy of 4 pies. So they have also got to realise that the hotel business is capable of being taxed a little more than other kinds of business.

There is another aspect of the question which I want the select committee to consider, that is about the constitution of tribunal and advisory body, as recommended by the committee. The committee has given very weighty reasons for the constitution of these two bodies. While the Government accept the other recommendations, they have not assigned any reason in regard to this particular recommendation. I believe that this recommendation was made by the committee to afford the necessary relief to the mercantile community who pay these taxes. This constitution of a tribunal and advisory body is very necessary.

The next vexed question—the committee has used that word very often—is one of single point levy over the mill cloth and the power-loom cloth. I have some experience of these power-looms. I happen to associate myself with power-loom workers two years ago. It is difficult for power-loom factories to compete successfully against mills. Therefore there must be some reduction in the case of levy of tax on power-looms. The committee has suggested only 6 pies. Now in the amending Bill, without realising the difference between mill cloth and power-loom cloth, they want to levy a flat rate of 2 annas both on mill and power-loom cloth. That would be unjust. Therefore the select committee may kindly take into consideration the prosperity of the power-loom, if at all there is any prosperity associated with it. Most of the power-looms are run by educated employers. Government have already given loans to the educated unemployed who have taken to this profession. It is within my knowledge that a large number of these people are poor, they have borrowed money and have set up one or two power-looms. What should be the attitude of the select committee in such cases should also be examined.

My Hon'ble friend Sri A. Bheemappa Naik, though inadvertently allowed agarbattis to be added on to Schedule II, put in a powerful plea for the exclusion of this article from the list. In fact a few women came on a deputation to me and said that it is a cottage industry and that with a capital of Rs. 25 or Rs. 30 they are making a living out of it and if that is taxed at the source they would be hit hard. Therefore I would make an earnest appeal to the Hon'ble Minister for Revenue who is likely to be the Chairman of the select committee as well to kindly consider whether exemption cannot be granted to this commodity.

I would like to add one more observation. Nobody has raised the question of pencils. Every parent knows what it is. It is the parent alone that can realise the difficulties of getting the pencils that their children use almost every day. Therefore that commodity also requires to be exempted from tax, because even the poorer section cannot afford to go without pencils. Therefore I believe my friends also will agree with me when I put in a powerful plea for the exemption of pencils from this tax.

Sri K. PATTABHIRAMAN.—Please appeal to the Revenue Minister.

Sri T. MARIAPPA.—The question of exempting beedi has found a very powerful plea.....

Sri L. SIDDAPPA.—In Chapter III it is there.

Sri A. BHEEMAPPA NAIK.—In the report.

Sri T. MARIAPPA.—Sri Pattabhiraman voiced a powerful plea on behalf of beedi. Sri Imam did not plead for exemption of beedis but he echoed the sentiments expressed by Sri K. Pattabhiraman. This is a cottage industry mostly run by people who have got small capital. It is true that there are big beedi merchants also running this industry. But such merchants are small in number. There is a large number of small people who have taken to this profession, who live by that. There is also fierce competition from outside. To what extent this deserves exemption may be examined. I am not very certain, because I have no full knowledge of the situation of this industry. (*Interruption*)

There is another suggestion which the committee have made to the Government. I would quote only the relevant portion of what the committee have suggested :

> " In this connection it has to be noticed that sales-tax will be an elastic source of revenue to the State. By suitably changing the rates, the revenue could be altered to meet the needs. When thousands of commodities are dealt with under the Sales-tax Act the committee cannot indicate any hard and fast rule or rate regarding any particular commodity or whether a particular commodity should be brought under single point levy or multi-point levy. It may be necessary in certain cases and circumstances to alter the rates on any particular commodity or to bring any particular commodity under tho single point levy or *vice versa* as judged from the then existing conditions of the business or industry."

Though the committee has suggested the commodities which may come under the single point levy and the rates therefor, it must always be open to Government to change these rates or to bring any particular commodity under the single point system or *vice versa* to give effect to public demands consistent with revenue and other considerations.'

I believe this suggestion of the committee is very handy for the Government and they must thoroughly be satisfied with it. Therefore this Bill is really modelled on that recommendation. If the Bill that emerges out of the select committee is on all fours with the recommendations made by the committee, it would meet with the approval of the House. One need not be apprehensive about the income to Government from the working of this Act, because the committee has suggested that by suitably altering the rates or changing the commodities from one schedule to another, they can get such revenues as they want provided it is not harmful to any one interest concerned. With these few words I would make a very earnest appeal to the Government to give effect to the powerful plea put forward to consider the wisdom that was voiced here in a very sympathetic manner and see that the select committee goes through the whole question in detail and submits a report to this House in such a manner as to be acceptable to all sections of the House.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಹಿಂದೆ ಮಾತನಾಡಿದಂಥಾ ಶ್ರೀ ಇಮಾಂರವರು " ನಮ್ಮ ಸರ್ಕಾರ ಇಂಥಾ ತೆರಿಗೆ ಹಾಕಲಿಲ್ಲ, ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಈ ತೆರಿಗೆಯನ್ನು ಹಾಕಿದೆ " ಎಂದು ಹೇಳಿದರು. ಇಕ್ಫ್ಲೇಷ್ಯಾವ ರೀತಿ ಆಯಿತು ಎಂಬುದು, ಬ್ರಿಟಿಷ್ ಸರ್ಕಾರ ನೋಟ್‌ಗಳನ್ನು ಪ್ರಿಂಟ್‌ಮಾಡಿ ಕೊಟ್ಟು ಮೈಸೂರು ಸರ್ಕಾರದ ಸಹಾಯಕ್ಕೆ ಬಂದದ್ದು ಅವರಿಗೆ ಮರೆತು ಹೋಯಿತು ಎಂದು ಕಾಣುತ್ತದೆ. ಅದಕ್ಕೆ ಅವರು ಈ ತೆರಿಗೆಯನ್ನು ಹಾಕಲಿಲ್ಲ. ಇಲ್ಲದೇ ಇದ್ದರೆ ಹಾಕುವುದಕ್ಕೆ ಪ್ರಯತ್ನಪಡುತ್ತಾ ಇದ್ದರೋ ಏನೋ! ಹಣ ಒಬ್ಬರಿಂದ ಒಬ್ಬರಿಗೆ ಓಡಾಡುತ್ತಾ ಇದ್ದರೆ ಮಾತ್ರ ಹಣ ಕಾಸಿನ ಸ್ಥಿತಿ ಒಂದು ಸ್ಥಿಮಿತದಲ್ಲಿರುವುದಕ್ಕೆ ಸಾಧ್ಯವಾಗುತ್ತದೆಯೇ ಏನಾ ಇಲ್ಲದಿದ್ದಲ್ಲಿ ಸಾಧ್ಯವಾಗುವುದಿಲ್ಲ. ಚೆಂಡಾಟದಲ್ಲಿ ಚೆಂಡನ್ನು ಒಬ್ಬರಿಂದ ಇನ್ನೊಬ್ಬರಿಗೆ, ಇನ್ನೊಬ್ಬರಿಂದ ಮತ್ತೊಬ್ಬರಿಗೆ ಕೊಡುತ್ತಾ ಕೊಡುತ್ತಾ ಎಸೆದಾಡುವ ಹಾಗೆ ಹಣವೂ ಸಹ ಸರ್ಕಾರದವರಿಂದ ಜನಕ್ಕೆ ಜನರಿಂದ ಸರ್ಕಾರಕ್ಕೆ ಸೇರಬೇಕು.

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

ಮುಖ್ಯವಾಗಿ ಈ ಕಾನೂನಿನಲ್ಲಿ ಸ್ಯಾಬ್‌ಸಿಸ್ಟಂನಂತೆ ಸೆಕ್ಷನ್ (3) ರಲ್ಲಿ ಹೇಳಿರುವ ಪ್ರಕಾರ ಮೊದಲನೇ 20,000 ಕ್ಕೆ 150 ರೂಪಾಯಿ ತೆರಿಗೆ ಅಂತಲೂ, ಅನಂತರ 5,000 ಅಥವಾ ಅದಕ್ಕಿಂತ ಕಡಮೆ ಬರುವುದಕ್ಕೆ 75 ರೂಪಾಯಿ ತೆರಿಗೆ ಅಂತಲೂ ವಿಧಿಸಲಾಗಿದೆ. ಇದರಿಂದ ಏನಾಗುತ್ತದೆ ಎಂದರೆ ಒಂದು ಲಕ್ಷ ರೂಪಾಯಿ ವ್ಯಾಪಾರಮಾಡತಕ್ಕವನು 1,350 ರೂಪಾಯಿ ತೆರಿಗೆ ಕೊಡಬೇಕಾಗುತ್ತದೆ. ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ವ್ಯಾಪಾರಮಾಡತಕ್ಕ ಮನುಷ್ಯ ತನ್ನ ವ್ಯಾಪಾರದಲ್ಲಿ ಶೇಕಡ $1\frac{1}{2}$ ಸರ್ಕಾರಕ್ಕೆ ಕೊಡಬೇಕಾದ ಸಂದರ್ಭ ಬರುತ್ತದೆ. ಎರಡು ಪರ್ಸೆಂಟ್‌ವರೆಗೂ ತೆಗೆದುಕೊಳ್ಳಬಹುದು, ನಗದು ವ್ಯಾಪಾರ ಮಾಡತಕ್ಕ ಸಂದರ್ಭದಲ್ಲಿ ಶೇಕಡ $\frac{1}{2}$ ರಿಬೇಟ್ ಕೊಡಬೇಕೆಂದಿದ್ದು ಶೇಕಡ $1\frac{1}{2}$ ಬರುತ್ತದೆ. ಸರ್ಕಾರದ ತೆರಿಗೆ 1-5-4 ಕೊಟ್ಟು, 2 ಆಣೆ 5 ಕಾಸು ಲಾಭ ಅವನಿಗೆ ಬರುತ್ತದೆ. 25,000 ರೂಪಾಯಿಗೆ ಮೇಲ್ಪಟ್ಟು ವ್ಯಾಪಾರ ಮಾಡತಕ್ಕವನು ಈಗಿರುವ ಕಾನೂನಿನಂತೆ ಒಳ್ಳೆಯ ವ್ಯಾಪಾರಮಾಡತಕ್ಕವನು ಮತ್ತು ಲೆಖ್ಖ ಇಡಬಲ್ಲ. ಮಾರಾಟದ ತೆರಿಗೆಯನ್ನು ಕೊಂಡುಕೊಳ್ಳುವವನಿಂದ ತೆಗೆದುಕೊಳ್ಳುವಂತೆ ಈ ರೀತಿ ಮಾರಾಟ ತೆರಿಗೆಯನ್ನು ಕೊಳ್ಳುವವನಿಂದ ವಸೂಲುಮಾಡಿ ಸರ್ಕಾರಕ್ಕೆ ಕೊಡುತ್ತಾರೆ. 20 ಸಾವಿರ ರೂಪಾಯಿಗೆ ಮೇಲ್ಪಟ್ಟು ವ್ಯಾಪಾರ ಮಾಡತಕ್ಕವನು ಲೆಕ್ಕ ಇಡುವುದಕ್ಕೆ ಅನುಕೂಲವಾಗುತ್ತದೆ. ಅವನು ಮಾರಾಟದ ತೆರಿಗೆಯನ್ನು ಜನರಿಂದ ತೆಗೆದುಕೊಂಡು ಸರ್ಕಾರದವರಿಗೆ ಕೊಡಬೇಕು. ಹೋಲ್‌ಸೇಲ್ ಡೀಲರುಗಳು ಅನೇಕ ಸಂದರ್ಭಗಳಲ್ಲಿ ಶೇಕಡ 2 ಅಥವಾ 3 ಲಾಭಮಾಡುವುದೂ ಉಂಟು. ಅಂಥಾ ಸಂದರ್ಭದಲ್ಲಿ ಈ ಟ್ಯಾಕ್ಸ್ ಹೋಗುತ್ತಾ ಶೇಕಡ 1 2 ಉಳಿದರೆ ಹೆಚ್ಚಾಗುತ್ತದೆ. ಸುಂಕ ವಸೂಲುಮಾಡದೇ ತನ್ನ ಲಾಭದಲ್ಲೇ ಕೊಡಬೇಕೆಂದು ಹೇಳುವುದು ನ್ಯಾಯವಲ್ಲ. ಸುಂಕ ವಸೂಲು ಮಾಡಿರುವುದರ ಮೇಲೆ ಸರ್ಕಾರದವರು, ಕೇಳುವುದು ಉಚಿತವೇ ಏನಃ ತನಗೆ ಬರತಕ್ಕ ಲಾಭಾಂಶದಲ್ಲೇ ಸುಂಕ ಕೊಡು ಎಂದರೆ ಇಕಂಟ್ಯಾಕ್ಸ್ ಬೇರೆ ಕೊಟ್ಟು ಈ ಸುಂಕ ಕೊಡುವುದು ಹೇಗೆ ನ್ಯಾಯವಾಗುತ್ತದೆ ಎಂಬುದು ಅರ್ಥವಾಗುವುದಿಲ್ಲ. 25,000 ರೂಪಾಯಿಗೆ ಮೇಲ್ಪಟ್ಟು ವ್ಯಾಪಾರ ಮಾಡತಕ್ಕವನು ಈ ಸುಂಕ ವಸೂಲುಮಾಡಿ ಸರ್ಕಾರಕ್ಕೆ ಕೊಡುವಂತೆ ಮಾಡುವುದೇ ನ್ಯಾಯ.

ಇದರಲ್ಲಿ ಬೀಡಿಗಳಿಗೂ ಕೂಡ ತೆರಿಗೆ ಹಾಕಬೇಕೆಂದು ಮಾತಾಡಿದ್ದಾರೆ. ಮೈಸೂರು ಸಂಸ್ಥಾನಕ್ಕೆ ಹೊರಗಡೆಯಿಂದ ಬಹಳವಾಗಿ ಬೀಡಿ ಬರುತ್ತದೆ. ಬೀಡಿ ಕೈಗಾರಿಕೆ ಹೊಟ್ಟೇಲು ವ್ಯಾಪಾರದಂತೆ ನಡೆಯುತ್ತಾ ಇದೆ ಎಂದು ಕಂಡುಬರುತ್ತಾ ಇದೆ. ಲಕ್ಷಾಂತರ ರೂಪಾಯಿ ವ್ಯಾಪಾರಮಾಡತಕ್ಕವರಿಗೆ ರೂಪಾಯಿನಲ್ಲಿ ಒಂದು ಕಾಸು ಕೊಡುವುದು ಏನೂ ಒಂದು ದೊಡ್ಡದಾಗುವುದಿಲ್ಲ; ರೂಪಾಯಿಗೆ ಮೂರು ಕಾಸು ಮಾಡಿದರೂ ಕೂಡ ವಿರೋಧ ಬರುವುದಿಲ್ಲ ಎಂದು ಕಂಡುಬರುತ್ತದೆ. ಕಡಲೇಕಾಯಿ ಮೇಲೆ ಏಕೆ ತೆರಿಗೆ ಹಾಕಬೇಕು ಎಂದು ಕೇಳಿದರು. ಕಡಲೇಕಾಯಿ ಮೈಸೂರು ಸಂಸ್ಥಾನದಿಂದ ಹೊರಗೆ ರವಾನೆಯಾಗುತ್ತದೆ. ಡಾಲ್ಡಾ, ಎಣ್ಣೆ ಇವೆಲ್ಲಾ ತಯಾರಾಗುತ್ತದೆ. ಇದರ ಮೇಲೆ ಹಾಕಿರತಕ್ಕ 3 ಕಾಸು ಬಹಳ ಹೆಚ್ಚು ಎಂದು ಕಂಡುಬರುವುದಿಲ್ಲ. ಆದರೂ ಈ ಸುಂಕದಲ್ಲಿ ಕೆಲವು ಬಡ ಲಾವಣಿಗಳಾಗಲೇ ಬೇಕು ಎಂಬುದು ಜನತೆಯ ಅಭಿಪ್ರಾಯ ಎಂದು ಕಂಡುಬರುತ್ತಾ ಇದೆ.

ಲೆಕ್ಕ ಪುಸ್ತಕಗಳನ್ನು ತನಿಖೆ ಮಾಡತಕ್ಕ ಸೇಲ್ಸ್ ಟ್ಯಾಕ್ಸ್ ಆಫೀಸರುಗಳಿಗೆ ಕೊಟ್ಟಿರತಕ್ಕ ಅಧಿಕಾರ ಬಹಳ ಹೆಚ್ಚಿನದು ಎಂದು ಕಂಡುಬರುತ್ತದೆ. ಅನೇಕ ಸಣ್ಣ ಸಣ್ಣ ಊರುಗಳಲ್ಲಿ ಪಾರ್ಟಿಗಳಿರುವುದರಿಂದಲೂ ಮತ್ತು ಇವರು ಬೇರೆ ಬೇರೆ ಕೋಮುಗಳಿಗೆ ಸೇರಿದವರಾಗಿರುವುದರಿಂದಲೂ, ಕೋಮುವಾರು ಭಾವನೆಯಿಂದಾಗಲೀ ಅಥವಾ ಪಾರ್ಟಿ ವೈಶಮ್ಯದಿಂದಾಗಲೀ ಯಾರಿಗಾದರೂ ತೊಂದರೆ ಕೊಡಬೇಕೆಂದರೆ ಕೋಮುವಾರು ಭಾವನೆ ಅಥವಾ ಪಾರ್ಟಿ ಮನೋಭಾವ ಇರುವ ಅಧಿಕಾರಿಗಳು ಅಧಿಕಾರವನ್ನು ದುರುಪಯೋಗಮಾಡಿಕೊಳ್ಳಲು ಬೇಕಾದಷ್ಟು ಅವಕಾಶ ಇದೆ. ಪ್ರತಿನಿತ್ಯ ವ್ಯಾಪಾರ ಮಾಡತಕ್ಕವರು, ಹೊಟೇಲ್‌ನವರು ಮತ್ತು ಇತರರು ಅನೇಕ ಸಂದರ್ಭಗಳಲ್ಲಿ ಕೈಗಡ ಹಣವನ್ನು ತಂದು ವ್ಯಾಪಾರ ಮಾಡುತ್ತಾರೆ. ಅದಕ್ಕೆ ಲೆಕ್ಕ ಬರೆದಿಡುವುದೇ ಇಲ್ಲ. 500-1000 ರೂಪಾಯಿ ಬೆಳಿಗ್ಗೆ ತಂದು ವ್ಯಾಪಾರ ಮಾಡಿ ಸಾಯಂಕಾಲ ವಾಪಸು ಕೊಟ್ಟುಬಿಡುತ್ತಾರೆ. ಅಕಸ್ಮಾತ್ತಾಗಿ ಲೆಕ್ಕ ತನಿಖೆ ಮಾಡತಕ್ಕ ಸಂದರ್ಭದಲ್ಲಿ ಆ ರೀತಿ ತಂದಿರತಕ್ಕ 500 ಅಥವಾ ಸಾವಿರ ರೂಪಾಯಿಗಳನ್ನು ಏಕೆ ಲೆಕ್ಕದಲ್ಲಿ ತೋರಿಸಲಿಲ್ಲ ಎಂದು ಹೇಳಿ ದೂರು ಹೊರಿಸುವುದಕ್ಕೆ ಅವಕಾಶವಿದೆ. ಆ ಅಧಿಕಾರಿ ಯಾವ ಸ್ಥಳಕ್ಕೆ, ಎಲ್ಲಿಗೆ ಬೇಕಾದರೂ ಹೋಗಿ ತನಿಖೆ ಮಾಡಬಹುದು. ಈ ಅಧಿಕಾರ ಅವನಿಗೆ ಕೊಡುತ್ತೀರಿ; ಅದರಿಂದ ಬಹಳ ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂಬುದು ಕಂಡುಬರುತ್ತದೆ.

ಮಿಲ್ ಬಟ್ಟೆ ಮೇಲೆ ಸುಂಕ ಹಾಕಿದ್ದೀರಿ. ಕೈಮಗ್ಗದ ಬಟ್ಟೆಗಳಿಗೂ ಮತ್ತು ಗೃಹ ಕೈಗಾರಿಕೆಗೂ ಉತ್ತೇಜನ ಕೊಡಬೇಕೆಂದು ಹೇಳಿ ರಾಜಗೋಪಾಲಾಚಾರಿಯವರು ಈ ಮಿಲ್ ಬಟ್ಟೆಗೆ ಗಜಕ್ಕೆ 2 ಆಣೆ ಸುಂಕ ಹಾಕಿದ್ದರು. ನಮ್ಮ ದೇಶದಿಂದ ಸುಮಾರು 20 ಸಾವಿರ ಬೇಲ್‌ಗಳಷ್ಟು ಬಟ್ಟೆ ಹೊರ ದೇಶಗಳಿಗೆ ರವಾನೆಯಾಗುತ್ತಿದೆ. ಹೊರ ದೇಶದವರು ಈ ತೆರಿಗೆ ಕೊಟ್ಟು ಕೊಂಡುಕೊಳ್ಳುತ್ತಾರೆ. ನಮ್ಮ ಮೈಸೂರು ಸಂಸ್ಥಾನದಲ್ಲಿರತಕ್ಕ ಬಿನ್ನಿಮಿಲ್‌ನಲ್ಲಿ ಉತ್ತಮವಾದ ಬಟ್ಟೆ ತಯಾರಾಗುತ್ತದೆ. ಶ್ರೀಮಂತರು ಉಪಯೋಗಿಸತಕ್ಕ ಬಟ್ಟೆ ಹೊರ ದೇಶಗಳಿಗೆ ರವಾನೆಯಾಗುತ್ತದೆ. ಆದ್ದರಿಂದ ಈ ಸುಂಕ 2 ಆಣೆ ಒಂದೇ ಸ್ಥಳದಲ್ಲಿ ಹಾಕುವುದರಿಂದ ಸರ್ಕಾರದವರಿಗೂ ಸಹ ಸ್ವಲ್ಪ ಹೆಚ್ಚಿಗೆ ಹಣ ಬರುತ್ತದೆ. 16 ಕೌಂಟ್‌ಗಿಂತ ಕಮ್ಮಿ ಇರತಕ್ಕ ಒರಟು ಬಟ್ಟೆಗೆ ಈಗ ಹಾಕಿರತಕ್ಕ 9 ಕಾಸು ಸುಂಕ ಜಾಸ್ತಿ; ಅದನ್ನು ಕಡಮೆ ಮಾಡುವುದು ನ್ಯಾಯ ಎಂದು ಕಂಡುಬರುತ್ತದೆ. ಮಿಲ್‌ಗೂ ಮತ್ತು power-loomಗೂ ಹೈಪೋಟಿ ಇರುವುದು ಕಂಡುಬರುತ್ತಾ ಇದೆ. ಪವರ್ ಲೂಂನವರು ಇಷ್ಟು ಸುಂಕ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಮಗ್ಗ ಇಟ್ಟುಕೊಂಡು, ಇನ್ನೊಬ್ಬರಿಂದ ಸಾಲ ತಂದು ಬಟ್ಟೆ ತಯಾರುಮಾಡಿ, ಅದನ್ನು ಮಾರಾಟ ಮಾಡಿ ಅದರಿಂದ ಬರತಕ್ಕ ಹಣದಲ್ಲಿ ಸರ್ಕಾರದವರಿಗೆ ಕೊಡಬೇಕಾದ ಸುಂಕ ಕೊಟ್ಟು, ಸಾಲತೀರಿಸಿ ತನ್ನ ಜೀವನ ಮಾಡಬೇಕೆಂದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ಕಡಮೆ ಮಾಡಬೇಕು ಮತ್ತು ಪವರ್ ಲೂಮ್ ಬಟ್ಟೆ ವ್ಯಾಪಾರ ಮಾಡುವ ಹೋಲ್ ಸೇಲ್ ವ್ಯಾಪಾರಿ ಸುಂಕ ಕೊಡುವಂತೆ ಮಾಡಬೇಕು.

ಇನ್ನು ಹೋಟಲುಗಳ ವಿಚಾರ ತೆಗೆದುಕೊಂಡರೆ, ಹೋಟಲ್‌ನಲ್ಲಿ ಕದಲೆಹಿಟ್ಟು, ಎಣ್ಣೆ ಇತ್ಯಾದಿ ವಸ್ತುಗಳನ್ನು ಪಯೋಗಿಸಿ ತಯಾರಿಸತಕ್ಕ ಆಹಾರ ಪದಾರ್ಥಗಳ ಮೇಲೆ ಸುಂಕ ಕೊಡಿ ಎಂದು ಹೇಳುವುದು ಅರ್ಥ

ವಾಗುವುದಿಲ್ಲ. ದಿನಸಿ ಅಂಗಡಿಯಲ್ಲಿ ಈ ಸಾಮಾನು ಗಳನ್ನಿಟ್ಟುಕೊಂಡು ವ್ಯಾಪಾರ ಮಾಡತಕ್ಕವನಿಂದ ಇದನ್ನು ಸುಲಭವಾಗಿ ವಸೂಲು ಮಾಡುವುದಲ್ಲದೆ ಹೊಟೇಲ್‌ನವರಿಂದಲೂ turnover tax ಕೊಡ ಬೇಕೆಂದು ಹೇಳಿ ವಸೂಲುಮಾಡುವುದು ಅರ್ಥವಾಗು ವುದಿಲ್ಲ. ಕೆಲವು ಹೋಟೆಲ್‌ಗಳವರು ಬೇಕಾದಷ್ಟು ಲಾಭ ಮಾಡುತ್ತಾರೆ. ಆದರೆ ಹೆಚ್ಚಾಗಿ ಯಾರು ವ್ಯಾಪಾರ ಮಾಡುತ್ತಾರೋ ಅವರ ಮೇಲೆ ಹೆಚ್ಚಿನ ಸುಂಕ ಹಾಕಿ. ಹಾಗೆಮಾಡದೆ ಎಲ್ಲರ ಮೇಲೂ ಒಂದೇ ರೀತಿ ಹಾಕುವುದು ಒಳ್ಳೆಯದಲ್ಲ. ಸಣ್ಣ ಸಣ್ಣ ಹೋಟೆಲುಗಳವರಿಗೆ ವಿನಾಯಿತಿ ದೊರೆಯುವಂತೆ ಅವ ಕಾಶ ಮಾಡಿಕೊಡುವುದು ಉತ್ತಮ ಎಂದು ಕಂಡು ಬರುತ್ತದೆ. ಈ ಎಲ್ಲಾ ವಿಚಾರಗಳನ್ನೂ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಿ ಪುನಃ ಈ ಸಭೆಯ ಮುಂದೆ ಅದನ್ನು ಇಡತಕ್ಕವರಾಗಿದ್ದಾರೆ. ಶ್ರೀ ಇಮಾಂರವರು ಈ ವರದಿ ಕೊಡಬೇಕಾದರೆ ತಿಂಗಳು ಗಟ್ಟಲೆ ಆಗಬಹುದು ಎಂದು ಹೇಳಿದರು. ತಿಂಗಳು ಗಟ್ಟಲೆ ಕುಳಿತು ಕೊಂಡು ಪರಿಶೀಲನೆ ಮಾಡಬೇಕಾದ ಅವಶ್ಯಕತೆ ಇಲ್ಲ. ಈಗಾಗಲೇ ಎಲ್ಲಾ ವ್ಯಾಪಾರಿಗಳು ಒಂದು ಸೇಲ್ಸ್‌ಟ್ಯಾಕ್ಸ್ ಸಮಿತಿಯ ಮುಂದೆ ತಮ್ಮ ಸಲಹೆಗಳನ್ನು ಇಟ್ಟಿದ್ದಾರೆ. ಅವನ್ನು ಗಮನದಲ್ಲಿಟ್ಟು ಕೊಂಡು ಒಂದೆರಡು ದಿನಗಳಲ್ಲೇ ಸೆಲೆಕ್ಟ್ ಸಮಿತಿಯ ವರು ಸೇರಿ ವಿಷಯಗಳನ್ನೆಲ್ಲಾ ಪರಿಶೀಲನೆಮಾಡಿ ತಮ್ಮ ವರದಿಯನ್ನು ಕೊಡುವುದು ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಆರ್. ನಾಯ್ಡು (ಮಲ್ಲೇಶ್ವರಂ).—ಅಧ್ಯಕ್ಷ ಮಹಾಶಯರೇ, ಈಗತಾನೆ ನಮ್ಮ ಮುಂದೆ ಅನೇಕ ನುರಿತವರೂ ಮತ್ತು ಅರಿತವರೂ ಕೂಡ ದೀರ್ಘವಾದ ತಮ್ಮ ಭಾಷಣಗಳನ್ನು ಮಾಡಿ ತಮ್ಮ ಮುಖಾಂತರ ನಮ್ಮೆಲ್ಲರಿಗೂ ಮನವರಿಕೆಯಾಗುವಂತೆ ತಿಳಿಸಿದ್ದಾರೆ. ಎಂದ ಮೇಲೆ ನನ್ನದು ಏನಪ್ಪಾ ಅಂದರೆ, ನಾನು ಅಂಕಿಅಂಶಗಳ ಗೋಜಿಗೆ ಹೋಗು ವುದಿಲ್ಲ. ಹೋಟೆಲ್‌ನವರ ಸ್ಥಿತಿಗತಿಗಳು ಏನು ಎಂಬುದನ್ನು ಹೇಳುತ್ತೇನೆ. ಹೋಟೆಲ್‌ನವರಷ್ಟು ಅನುಕೂಲಸ್ಥರು ಯಾರೂ ಇಲ್ಲವೆಂದೇನೋ ಎಲ್ಲರಿಗೂ ಕಾಣುತ್ತದೆ. ನಾನೊಬ್ಬ ಹೋಟೆಲ್ ವ್ಯಾಪಾರಿ ಯಾಗಿ ಕೆಲವು ವರ್ಷಗಳಕಾಲ ಇದ್ದುದರಿಂದ ಅದರ ಅನುಭವವನ್ನು ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಸಭೆಯ ಮುಂದೆ ಹೇಳಲಿಕ್ಕೆ ನಿಂತಿದ್ದೇನೆ. ಒಂದು ಸ್ವಾಮಿ! ಎಲ್ಲಾ ಬಿಟ್ಟು ಬಿಟ್ಟು ಹೋಟೆಲ್‌ನವರನ್ನು ಹಿಡಿದುಕೊಂಡಿದ್ದೀರಲ್ಲಾ, ಯಾವ ನ್ಯಾಯ ಅದು! ನೀವು ಬರುತ್ತೀರಿ ಎಷ್ಟು ವಿಶ್ವಾಸದಿಂದ! ನಾವು ಬನ್ನೀ ಸ್ವಾಮಿ, ಕುಳಿತುಕೊಳ್ಳಿ, ಏನು ತಿಂಡಿಬೇಕು ಎಂದು ವಿಚಾರಮಾಡಿ, ನಿಮ್ಮ ಟೈಂಗೆ ಸರಿಯಾಗಿ ತಿಂಡಿ ತಂದುಕೊಟ್ಟು ಉಪಚಾರ ಮಾಡು ವುದಿಲ್ಲವೇ? ಮನೆಯಲ್ಲಿರುವ ಹೆಂಗಸೂಕೂಡ ಇಷ್ಟು ಭಕ್ತಿ ವಿಶ್ವಾಸದಿಂದ ನೋಡಿಕೊಳ್ಳುವುದಿಲ್ಲ. ಅಂಥಾ ದ್ದರಲ್ಲಿ ಈಗ ಕೇವಲ ಹೋಟೆಲ್‌ನವರನ್ನು ಹಿಡಿದು ಕೊಳ್ಳಬೇಕಾದರೆ ಏನು ಕಾರಣ? ಯೋಚನೆಮಾಡ ಬೇಕಾಗಿದೆ. ಈಗ ಬೆಂಗಳೂರು ಹೆಚ್ಚೆಯಲ್ಲಿರತಕ್ಕ ಹೋಟೆಲುಗಳಿಗೆ ನೀವೆಲ್ಲರೂ ಪ್ರತಿದಿನ ಬರುತ್ತಾ ಇದ್ದೀರಿ, ಎಷ್ಟು ಪ್ರೀತಿಯಿಂದ ಉಪಚಾರಮಾಡಿ ಒಳ್ಳೆಯ ತಿಂಡಿ ಕೊಡುತ್ತೇವೆ! ಅಕಸ್ಮಾತ್ ಮಜ್ಜಿಗೆ ಹುಳಿಯಾಗಿದ್ದರೆ ಸಾಕು ಜಗಳಕ್ಕೇ ಬರುತ್ತೀರಿ! (ನಗೆ) ಈ ರೀತಿ ಭಯಭಕ್ತಿಯಿಂದ ನಿಮ್ಮೆಲ್ಲ ರನ್ನೂ ಉಪಚರಿಸಿ, ನಮ್ಮ ಮನೆ ಮಕ್ಕಳಿಗಿಂತಲೂ ಕೂಡ ಹೆಚ್ಚಾಗಿ ಪೋಷಣೆಮಾಡಿ ನಿಮ್ಮನ್ನ ಸಾಕಿ ಸಲಹಿದ ಮೇಲೆ ಈ ಹೋಟೆಲ್‌ನವರ ವಿಷಯದಲ್ಲಿ ನೀವು ಎಷ್ಟೋ ನಿಯತ್ತು ತೋರಿಸಬೇಕಾಗಿತ್ತು! (ನಗು!) ಈಗ ಹೆಚ್ಚು ಹೇಳುವುದಕ್ಕೆ ನನಗೆ ಅವ ಕಾಶವಿಲ್ಲ. ಈಗಾಗಲೇ ಅನೇಕರು ಹೋಟೇಲುಗಳ ವರ ಕಷ್ಟ ಏನು ಎಂಬುದನ್ನು ತಿಳಿಸಿದ್ದಾರೆ. ನಾನು ಅಂಕಿಅಂಶಗಳ ಗೋಜಿಗೆ ಹೋಗುವುದಿಲ್ಲ. 10 ಜನ ಹೇಳಿದ ಮಾತು ಒಪ್ಪುತ್ತೇನೆ. ಈ ಹೊಟೇಲ್‌ನವರ ಪಾಡು ಹೇಗಿದೆ ಎಂದರೆ, ಅವರು ತಮ್ಮ ಮಾನಮರ್ಯಾ ದೆಗಳನ್ನು ಕಾಪಾಡಿಕೊಳ್ಳುವುದೇ ಕಷ್ಟವಾಗಿದೆ. ಸಾಲ ಸೋಲಮಾಡಿ ನಡೆಸುತ್ತಾ ಇದ್ದಾರೆ. ಅರ್ಥವಾ ಯಿತೇ ಸ್ಯಾಮಿ? ತಿಳಿದುಕೊಳ್ಳಿ. ಏಕೆಂದರೆ ಇದನ್ನು ಹೇಳದೇ ಇದ್ದರೆ ವಿಧಿ ಇಲ್ಲ. ಅಲ್ಲಲ್ಲಿ ಯಾರೋ ಕೆಲ ವರು ಮಹಡಿ ಕಟ್ಟಿಸಿದರು, ಚೆನ್ನಾಗಿ ಸಂಪಾದಿಸಿದರು ಎಂದರೆ ಬಾಕಿಯವರ ಗತಿ ಏನು? ಮೈಸೂರು ಸಂಸ್ಥಾನದಲ್ಲಿ ಸಣ್ಣ ಪುಟ್ಟ ಹೋಟೇಲುಗಳು ನೂರಾರು ನಡೆಯುತ್ತಾ ಇವೆ. ಇದರಿಂದ ಒಂದು ಲಕ್ಷ ಜನ ನಿರುದ್ಯೋಗಿಗಳಾಗುತ್ತಾರೆ. ಅನೇಕ ಹೋಟೇಲು ಗಳವರ ಕಷ್ಟಪರಂಪರೆಯನ್ನು ಹೇಳತೀರದು. ಮನೆ ಬಾಡಿಗೆ ತಿಂಗಳಾದರೆ ಕೊಡಬೇಕು. ಮುನಿಸಿಪಲ್ ಟ್ಯಾಕ್ಸು ಕೊಡಬೇಕು, ಲೈಸೆನ್ಸ್ ಫೀ ಕೊಡಬೇಕು. ಅದರ ಜೊತೆಗೆ ಸೇಲ್ಸ್ ಟ್ಯಾಕ್ಸ್ ಬೇರೆ ಹಾಕುತ್ತಾ ಇದ್ದೀರಿ. ನಿಜವಾಗಿಯೂ ಕೂಡ ಮಹಾತ್ಮಾ ಗಾಂಧಿ ಯವರು ಈಗ ಇದ್ದಿದ್ದರೆ ಇದನ್ನೆಲ್ಲಾ ನೋಡಿ ಅಳುತ್ತಾ ಇದ್ದರೋ ಏನೋ ಎಂದು ನನಗೆ ಆನ್ನಿಸುತ್ತದೆ. ಉಪ್ಪಿನಮೇಲೆ ತೆರಿಗೆ ಹಾಕಬಾರದು ಎಂದು ಹೇಳಿದ ಮಹಾತ್ಮಾ ಗಾಂಧಿಯವರ ಮಾತನ್ನು ಮರೆಯಬಾ ರದು. ಹಾಗಿರುವಾಗ ಹೋಟೆಲ್‌ನವರ ಮೇಲೆ ಹಾಕು ವುದು ನ್ಯಾಯವೇ ಎಂಬುದನ್ನು ತಾವು ಸ್ವಲ್ಪ ತಿಳಿದು ಕೊಳ್ಳಬೇಕಾಗಿದೆ. ಸೆಲೆಕ್ಟ್ ಕಮಿಟಿಯವರು ಮತ್ತೊಂದು ಸಾರಿ ಪರಿಶೀಲನೆಮಾಡಿ ಈ ವ್ಯಾಪಾರಕ್ಕೆ ಸಹಾನುಭೂತಿ ತೋರಿಸಬೇಕೆಂದು ತಿಳಿಸುತ್ತೇನೆ.

ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇ ಕೆಂದು ಇಷ್ಟಪಡುತ್ತೇನೆ. ಈ ಹೋಟೆಲ್‌ನವರ ವಿಷಯ ಪರಿಶೀಲನೆ ಮಾಡುವಾಗ ಈ ಹೋಟೆಲ್‌ನ ವ್ಯಾಪಾರದಲ್ಲಿ ಅನುಭವಸ್ಥರೂ, ಕೆಲವು ವರ್ಷಗಳಕಾಲ ಹೋಟೆಲ್ ಇಟ್ಟು ಅದರ ಪರಿಸ್ಥಿತಿ ಏನು ಎಂಬುದನ್ನು ತಿಳಿದುಕೊಂಡಿರುವವರು, ಹೋಟೆಲ್ ಮಾಲೀಕರು ಇವರನ್ನು ಸಹ ಸೆಲೆಕ್ಟ್ ಕಮಿಟಿಯಲ್ಲಿ ಸೇರಿಸಿಕೊಂಡರೆ ತಪ್ಪಾಗಲಾರದು ಎಂದು ನನಗೆ ಅನ್ನಿಸುತ್ತದೆ. ಆ ರೀತಿ ಮಾಡುತ್ತೀರಿ ಎಂದು ನಾನು ನಂಬಿದ್ದೇನೆ.

ಈ ಸಮಯದಲ್ಲಿ ನರ್ಮಾರದವರಿಗೆ ಒಂದು ಸಲಹೆ ಮಾಡುತ್ತೇನೆ. ಏನೆಂದರೆ ಬೇಕಾದರೆ ನಾವು ಒಂದು ತಿಂಗಳು ಹೋಟೇಲುಗಳನ್ನೆಲ್ಲಾ ಮುಚ್ಚಿ ಬಿಡುತ್ತೇವೆ, ನೀವೇ ನಡೆಸಿ ಆಗ ಗೊತ್ತಾಗುತ್ತದೆ! ಖಂಡಿತ ನಿಮ್ಮ ಕೈಯಲ್ಲಿ ಆಗುವುದಿಲ್ಲ. ಈದಿನ ಹೋಟೇಲುನವರ ಪರಿಸ್ಥಿತಿ ಹೇಗಿದೆ, ದೇಶದಲ್ಲಿರತಕ್ಕ ವಾತಾವರಣ ಏನು ಎಂಬುದನ್ನು ಅರಿತುನುರಿತವರು ಹೇಳಿದ್ದಾರೆ. ಅದನ್ನು ಖಂಡಿತವಾಗಿಯೂ ಮನವರಿಕೆ ಮಾಡಿಕೊಳ್ಳಿ.

ಇನ್ನೊಂದು ಅಂಶವನ್ನು ಸರ್ಕಾರದವರ ಗಮ ನಕ್ಕೆ ತಂದು ನನ್ನ ಭಾಷಣವನ್ನು ಮುಗಿಸುತ್ತೇನೆ. ಸೇಲ್ಸ್ ಟ್ಯಾಕ್ಸ್ ಆಫೀಸರುಗಳಿಗೆ ತಾವು ಈಗ ಒಂದು ಅಧಿಕಾರ ಕೊಟ್ಟಿದ್ದೀರಿ. ಯಾರಿಗೂ ಹೆದರು ವುದಿಲ್ಲ, ಯಮನೊಬ್ಬನಿಗೇ ಹೆದರುವುದು ಎಂದು ಕೆಲವರು ಹೇಳುತ್ತಾರೆ. ಈಗಿನ ಕಾಲದಲ್ಲಿ ಯಮ ಯಾರು ಎಂದರೆ ಇವರೇ ಆಗಿದ್ದಾರೆ. ಅವರಲ್ಲಿ ಒಳ್ಳೆಯವರೂ ಇರಬಹುದು. ಅಂತೂ ಸೇಲ್ಸ್ ಟ್ಯಾಕ್ಸ್ ಆಫೀಸರು ಬಂದರು ಎಂದರೆ ಆಯಿತು, ಅವರ ಹತ್ತಿರ ಮಾತನಾಡುವ ಹಾಗೇ ಇಲ್ಲ.

(ಶ್ರೀ ಪಿ. ಆರ್. ನಾಯ್ಡು.)

6 P.M.

ಸರ್ಕಾರಕ್ಕೆ ವಗಮಾನ ಸಾಲದು, ಅದಕ್ಕಾಗಿ ಈ ತೆರಿಗೆ ಹೆಚ್ಚಿಸಬೇಕಾಗಿದೆ ಎಂದು ಹೇಳುವಾಗ ಜನರ ಪ್ರತಿಭಟನೆ ಜೋರಾಗಿದೆ. ಹಣವಿಲ್ಲಾ ಎಂದು ಹೇಳುವುದಾದರೆ ನನ್ನ ಜೊತೆಯಲ್ಲಿ ಬನ್ನಿ, ರಾಮ ರಾಮ ಎಂದು ಜೋಳಿಗೆ ಹಾಕಿಕೊಂಡು ಹೋಗೋಣ. ದೇಶದ ಹಿತಕ್ಕಾಗಿ ಒಬ್ಬೊಬ್ಬರು ಮೂರು ರೂಪಾಯಿ ಕೊಟ್ಟರೂ ಈ ದಿನ ಮೂರು ಕೋಟಿ ರೂಪಾಯಿ ವಸೂಲಾಗುತ್ತದೆ ಎಂಬ ಧೈರ್ಯವಿದೆ. ಹೀಗೇಕೆ ಮಾಡಬಾರದು ? ನಮ್ಮನೆ ಹಣವಿಲ್ಲವೆಂದು ಹೇಳಿದರೆ ಪ್ರಯೋಜನವಿಲ್ಲ. ರೈತರು ಹೆಚ್ಚಾಗಿದ್ದಾರೆ. ಈಗ ಮಳೆ ಚೆನ್ನಾಗಿ ಆಗಿದೆ. ಬೆಳೆಯೂ ತಕ್ಕಮಟ್ಟಿಗೆ ಚೆನ್ನಾಗಿದೆ. ಒಂದು ಖಂಡಗ ಆಗುವ ಕಡೆ ಹತ್ತು ಖಂಡಗ ಆಗಿದೆ. ಆದ್ದರಿಂದ ರೈತರು ಕೊಂಚ ಹಣ ಸಹಾಯ ಮಾಡಬಲ್ಲರು. ಅವರಲ್ಲಿ ಎಷ್ಟೋ ಮಂದಿ ಹಣವನ್ನು ಹೂತಿಟ್ಟು ಅದೆಲ್ಲಾ ಕೆಲುಬು ಹಿಡಿದಿದೆ. ಸರ್ಕಾರದಲ್ಲಿ ಹಣವಿಲ್ಲದಿರುವಾಗ ರೈತರು ಈರೀತಿ ಯಾಗಿ ಮುಚ್ಚಿಡುವುದು ಸರಿಯಲ್ಲ. ಆಮೇಲೆ ಹೋಜೇಲುಗಳ ವಿಚಾರ ಅನೇಕರು ತಿಳಿಸಿದ್ದಾರೆ. ಈ ದಿವಸ ಹೋಜೇಲುಗಳು ಉದ್ಧಾರವಾಗುವವರೆಗೂ ಯಾರೂ ಉದ್ಧಾರವಾಗುವುದಿಲ್ಲ. ಇದು ಅನುಭವದಿಂದ ಹೇಳುವ ಮಾತು. ಆದ್ದರಿಂದ ಮತ್ತೊಂದು ಸಾರಿ ಸೆಲೆಕ್ಟ್ ಕಮಿಟಿಯವರು ಬಹಳ ಸಾವಧಾನದಿಂದ ಒಳ್ಳೆಯ ವಾತಾವರಣದಲ್ಲಿ ಹೋಟಲುಗಳ ಕಷ್ಟ ನುಷ್ಟ ಗಳನ್ನು ಕೇಳಿ ತಿಳಿದುಕೊಂಡು ಆದಷ್ಟುಮಟ್ಟಿಗೆ ಅವರಿಗೆ ಸಹಾನುಭೂತಿ ತೋರಿಸಿ ಅನುಕೂಲ ಪಡಿಸ ಬೇಕೆಂದು ಪ್ರಾರ್ಥನೆಮಾಡಿ ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಟಿ. ಎಚ್. ಮುಂಡಲಗಿರಿಗೌಡ (ಕುಣಿಗಲು).— ಸ್ವಾಮಿ, ಈ ಸೇಲ್ಸ್ ಟ್ಯಾಕ್ಸ್ ತಿದ್ದುಪಡಿ ಮಸೂದೆಯ ಮೇಲೆ ಇಷ್ಟು ದೀರ್ಘವಾದ ಚರ್ಚೆಯಾಗುತ್ತದೆಂದು ನಾವು ತಿಳಿದುಕೊಂಡಿರಲಿಲ್ಲ. ನಮ್ಮ ಮುಂದೆ ಬಂದಿರುವ ಈ ಮಸೂದೆ ವ್ಯಾಪಾರಸ್ಥರು ಲೆಕ್ಕಗಳನ್ನಿಡುವ ವಿಷಯದಲ್ಲಿ ತೊಂದರೆಯಾಗುವುದೆಂದು ಮತ್ತು ಮಲ್ಟಿಪಾಯಿಂಟ್‌ನಂತೆ ಲೆಕ್ಕವನ್ನಿಟ್ಟರೆ ಅವರು ತಾವು ಕೈಯಿಂದ ತೆರಿಗೆ ಕೊಡಬೇಕಾದ ಸಂದರ್ಭ ಬೊದಗುತ್ತದೆ, ಈ ಕಷ್ಟ ನಿವಾರಣೆಮಾಡಲು ಒಂದು ಮಾರ್ಗ ಕಲ್ಪಿಸಬೇಕೆಂದು ಬಹಳವಾಗಿ ದೇಶದಾದ್ಯಂತವೂ ಕೂಡ ಹೇಳಿದ್ದರಿಂದ ತಿದ್ದುಪಡಿ ಮಾಡಿ ತರಬೇಕಾಯಿತು. ಹಾಗೆ ಮಾಡುವಾಗ ಇದಕ್ಕಾಗಿ ಒಂದು ಸಮಿತಿಯನ್ನು ರಚನೆಮಾಡಿ ಅದರ ವರದಿಯನ್ನು ತರಿಸಿಕೊಂಡು ಅದನ್ನು ಈ ಮಸೂದೆಯಲ್ಲಿ ಅಳವಡಿಸಿ ದೇಶದ ಹಿತದೃಷ್ಟಿಯಿಂದ ಒಂದೆರಡು ವಿಷಯಗಳನ್ನು ಮಾತ್ರ ಬದಲಾವಣೆ ಮಾಡಿ ಜವಾಬ್ದಾರಿಯುತವಾಗಿ ಈ ಮಸೂದೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಆದರೆ ಇದರಲ್ಲಿ ಎಷ್ಟುಮಟ್ಟಿಗೆ ಹೊರೆಯನ್ನು ಹೊರಿಸ ಬಹುದು, ಎಷ್ಟು ದುಬಾರಿಯಾಗಿದೆ ಎಂಬ ವಿಷಯ ವನ್ನು ಒಂದೆರಡು ವಿಚಾರಗಳಲ್ಲಿ ವಿಮರ್ಶೆ ಮಾಡುವುದು ಅಗತ್ಯವಾಗಿದೆ. ನಮ್ಮ ಕೆಲವುಮಾನ್ಯ ಸದಸ್ಯರು, ಸಮಿತಿಯವರು ಹೇಗೆ ವರದಿ ಮಾಡಿದ್ದಾರೋ ಹಾಗೆಯೇ ತಿದ್ದುಪಡಿಮಾಡಿ ಮಸೂದೆಯನ್ನು ತರ ಬೇಕಾಗಿತ್ತು, ಅದನ್ನು ಅಲ್ಪಸ್ವಲ್ಪ ಬದಲಾಯಿಸಿ ತರು ವುದುಸರ್ಕಾರಕ್ಕೆ ಉಚಿತವಲ್ಲವೆಂದು ಹೇಳಿದ್ದಾರೆ. ನನ್ನ ಅನುಭವದಲ್ಲಿ ಸರ್ಕಾರದವರು ಯಾವ ಸಮಿತಿಯನ್ನು ರಚಿಸಿದರೂ ಕೂಡ ಅದರ ವರದಿಯಂತೆಯೇ ಮಸೂದೆ ಯನ್ನು ರಚಿಸಿ ನಮ್ಮ ಮುಂದೆ ಇಡುತ್ತಿಲ್ಲವೆಂದು ನಾನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ಸಮಿತಿ ಯವರ ಸಲಹೆಯನ್ನು ಬದಲಾಯಿಸುವುದರಿಂದ ಕಾಂಗ್ರೆಸ್ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತದೆಂದು ಕೂಡ ಹೇಳಿದ್ದಾರೆ. ಆದರೆ ಸರ್ಕಾರ, ಸಂಸ್ಥೆ ಎರಡೂ ಒಂದೇ ಆಗಿರುವಾಗ ಸಂಸ್ಥೆಗೆ ಕೆಟ್ಟ ಹೆಸರು ಬಂದರೂ ಒಂದೇ ಸರ್ಕಾರಕ್ಕೆ ಕೆಟ್ಟ ಹೆಸರು ಬಂದರೂ ಒಂದೇ ಎಂದು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ನಮ್ಮ ಮುಂದೆ ತಿದ್ದುಪಡಿ ಮಸೂದೆಯನ್ನು ತಂದಿರುವುದರಿಂದ ಇದರಲ್ಲಿ ಏನು ಲೋಪದೋಷವಿದೆ, ಹೆಚ್ಚಿನ ಭಾರವೇನಿದೆ, ಅದನ್ನು ತಪ್ಪಿಸುವುದಕ್ಕೆ ಅವಕಾಶ ವಿದೆಯೇ ಎನ್ನುವುದನ್ನು ವಿಮರ್ಶೆ ಮಾಡುವುದು ಧರ್ಮ. ಸಮಿತಿ ಒಪ್ಪಿಸಿರುವ ವರದಿಯಲ್ಲಿ ಎಷ್ಟು ಭಾಗವನ್ನು ಸರ್ಕಾರದವರು ಅಳವಡಿಸಿದ್ದಾರೆ, ಅದರಿಂದ ವರ್ತಕವ್ಯಾಪಾರಕ್ಕೆ ಎಷ್ಟು ಅನುಕೂಲವಾಗುತ್ತದೆ ಎಂಬುದನ್ನು ವಿಮರ್ಶೆ ಮಾಡುವ ಸದಸ್ಯರು ಯಾರೂ ಇದ್ದಂತೆ ಕಾಣಲಿಲ್ಲ. ವಿರೋಧವಾದರೆ ಶ್ಲಾಘನೀಯವಾದ ಒಂದೆರಡು ಮಾತುಗಳನ್ನಾದರೂ ಯಾರಾದರೂ ಸದಸ್ಯರು ಈ ಸಂದರ್ಭದಲ್ಲಿ ಹೇಳಿದ್ದರೆ ಚೆನ್ನಾಗಿತ್ತು.

ಶ್ರೀ ಭೀಮಪ್ಪನಾಯಕರು ಮಲ್ಟಿಪಾಯಿಂಟಿನ ಮೇಲೆ, ಸ್ಲಾಬ್‌ಸಿಸ್ಟಂನಮೇಲೆ ಈ ದಿವಸ ಇಪ್ಪತ್ತೈದು ರೂಪಾಯಿಗಳನ್ನು ಹಾಕಿದ್ದಾರೆ, ಹಿಂದೆ ಮಲ್ಟಿಪಾಯಿಂಟಿನಮೇಲೆ ನೂರೈವತ್ತು ರೂಪಾಯಿಗಳ ವರೆಗೂ ನಮಗೆ ಬರುತ್ತಿತ್ತು ; ಅದನ್ನು ಕೊಡಲು ಎಷ್ಟೋ ಲೆಕ್ಕಗಳನ್ನು ಬರೆದು ಆಫೀಸುಗಳಿಗೆ ಒಪ್ಪಿಸಿ ಒಪ್ಪಿಗೆ ಪಡೆದು ಹಣಕೊಡಬೇಕಾಗಿತ್ತು, ಅಂಥ ಕಷ್ಟ ವನ್ನು ಈ ದಿವಸ ಹೋಗಲಾಡಿಸಿದೆ ಎಂದು ಹೇಳಿದರು. ಅನೇಕವಾಗಿ ಟೀಕೆಮಾಡಿದ ಯಾವ ಸದಸ್ಯರೂ ಕೂಡ ಇದಕ್ಕಾಗಿ ಒಂದು ಒಳ್ಳೆಯ ಮಾತನ್ನೂ ಸಹ ಆಡದೆ ಈ ಮಸೂದೆಯನ್ನು ವ್ಯರ್ಥಾ ತೊಂದರೆಪಡಿಸಲು ತಂದಿರುತ್ತಾರೆ, ಇದನ್ನು ತರಬಾರದಾಗಿತ್ತು ಎಂದು ಹೇಳಿದರು. ಅಲ್ಲದೆ ಇದನ್ನು ಪಾಪಸ್ ತೆಗೆದುಕೊಂಡು ಹಿಂದೇನಿತ್ತೋ ಅದೇ ಮಸೂದೆಯನ್ನು ಖಾಯಂ ಆಗಿ ಜಾರಿಗೆ ತರಬೇಕು ಎನ್ನುವ ವಾದಸರಣಿಯಲ್ಲಿ ಬಹು ತೇಕದ ಸದಸ್ಯರು ಹೇಳಿರುವುದು ಸರಿಯಲ್ಲ. ಇದರಿಂದ ವರ್ತಕವ್ಯಾಪಾರಕ್ಕೆ ನಷ್ಟ ಜಾಸ್ತಿಯಾಗಿದೆ ಎಂದು ಕೂಡ ಹೇಳಿದರು. ಇದರಲ್ಲಿ ಸಮಿತಿಯ ವರದಿಯ ಮೇಲೆ ಸರ್ಕಾರದವರು ಯಾವ ಯಾವ ವಿಷಯದಲ್ಲಿ ಜಾಸ್ತಿ ಮಾಡಿದ್ದಾರೆಂದು ವಿಮರ್ಶೆ ಮಾಡಿದರೆ ಹತ್ತು ಸಾವಿರ ರೂಪಾಯಿಗಳಿಂದ ಹನ್ನೆರಡುಸಾವಿರದೈನೂರು ರೂಪಾಯಿಗಳವರೆಗೆ ಐವತ್ತು ರೂಪಾಯಿಗಳ ತೆರಿಗೆಯನ್ನು ಸಮಿತಿ ವಿಧಿಸಿತು. ಇದನ್ನು ಸರ್ಕಾರ ದವರು ಎಪ್ಪತ್ತೈದು ರೂಪಾಯಿ ಮಾಡಿದ್ದಾರೆ. 15,000 ರೂಪಾಯಿಗಳಿಂದ 17,500 ರೂಪಾಯಿ ಗಳವರೆಗೆ ನೂರು ರೂಪಾಯಿ ತೆರಿಗೆ ಹಾಕಿದ್ದುದನ್ನು ಸರ್ಕಾರ ನೂರಇಪ್ಪತ್ತೈದು ರೂಪಾಯಿಗಳಿಗೆ ಹೆಚ್ಚಿಸಿದೆ. ಇದರ ಉದ್ದೇಶ ಯಾರು ಹೆಚ್ಚು ವ್ಯಾಪಾರ ಮಾಡುತ್ತಿರುತ್ತಾರೋ ಅವರು ಹೆಚ್ಚು ಲಾಭವನ್ನು ಗಳಿಸುವುದಕ್ಕೆ ಅವಕಾಶವಿದೆ ; ಆದ್ದರಿಂದ ಅವರಿಗೆ ಟರ್ನ್ ಓವರ್ ಜಾಸ್ತಿಯಾದ ಹಾಗೆ ಹೆಚ್ಚಾಗಿ ತೆರಿಗೆ ಯನ್ನು ಹಾಕುವುದು ಸೂಕ್ತ ಎಂಬ ಒಂದು ದೃಷ್ಟಿ ಯಿಂದ ಸರ್ಕಾರದವರು ಏರಿಸಿದ್ದಾರೆ.

ಹೀಗೆ ಒಂದೆರಡು ವಿಷಯಗಳನ್ನು ಬಿಟ್ಟರೆ ಅದರಲ್ಲೂ ನಮ್ಮ ಈ ಸಭೆಯಲ್ಲಿ ಹೆಚ್ಚು ವಿರೋಧ ಬಂದಿರುವುದು, ಈ ವಿಷಯಗಳಿಗಿಂತಲೂ ಹೋಟಲುಗಳ ಮೇಲೆ ಹಾಕಿರುವ ತೆರಿಗೆ ಮತ್ತು ಪರ್‌ಲೂಮಿನ ಮೇಲೆ

ಹಾಕಿರುವ ತೆರಿಗೆ ವಿಚಾರದಲ್ಲಿ. ಹೋಟೇಲುಗಳ ತೆರಿಗೆ ವಿಷಯದಲ್ಲಿ ಈ ಸಭೆಯಲ್ಲಿ ಹೆಚ್ಚಿನ ಪ್ರತಿಭಟನೆಯನ್ನು ಸೂಚಿಸಿದ್ದಾರೆ. ಸಮಿತಿಯವರು 10,000 ರೂಪಾಯಿ ಗಳವರೆಗೆ ನೂರು ರೂಪಾಯಿ ತೆರಿಗೆ ಹಾಕಬಹುದೆಂದು ಹೇಳಿದ್ದಾರೆ. ಸರ್ಕಾರದವರು ಶೇಕಡ ಹತ್ತರಂತೆ ಹಾಕಬೇಕೆಂದು ಸೂಚಿಸಿದ್ದಾರೆ. ಹೆಚ್ಚು ಪರಿಮಿತಿ ಯಲ್ಲಿ ಸರ್ಕಾರದವರು ಅದನ್ನು ಸೂಚಿಸಿರುವುದು ನಿಜ. ಆದರೆ ಸಮಿತಿಯವರು ನೂರು ರೂಪಾಯಿ ಗಳನ್ನು ಹಾಕಬೇಕೆಂದು ಸೂಚಿಸಿರುವುದು ನ್ಯಾಯ ವಾಗಿದೆಯೇ ಎಂಬುದನ್ನು ಕೂಡ ಯೋಚನೆ ಮಾಡ ಬೇಕು. ಸಮಿತಿ ನೂರು ರೂಪಾಯಿ ಹಾಕಿರುವುದು ಕೇವಲ ಕಡಮೆ, ಆದ್ದರಿಂದ ಅದನ್ನು ಹಾಕುವುದಕ್ಕೆ ಬದಲಾಗಿ ಹಾಕದೇ ಬಿಡುವುದೇ ಸರಿ. ಅದಕ್ಕೆ ಬದಲಾಗಿ ಸರ್ಕಾರದವರು ಹಾಕಿರುವುದು ದುಬಾರಿಯಾಗಿದೆ. ಸಮಿತಿಯವರು ಸೂಚಿಸಿರುವುದು ಕೇವಲ ಕಡಮೆ ಎಂದು ಅರ್ಥ ಎಂದು ನಾನು ತಿಳಿಸುವವನಾಗಿದ್ದೇನೆ. ಆ ಉದ್ದೇಶದಿಂದಲೇ ಸರ್ಕಾರವು ಈ ಮಸೂದೆಯನ್ನು ಸಮಿತಿಯ ಮುಂದೆ ಹೋಗಬೇಕೆಂದು ಹೇಳಿರುವುದು. ಹೀಗೆ ಹೇಳಿರುವಾಗ ಹೋಟೇಲುಗಳ ಬಿಸಿನೆಸ್ ಯಾವ ಬಿಸಿನೆಸ್‌ಗೆ ಕಡಮೆಯಾಗಿದೆಯೆಂದು ಯೋಚನೆ ಮಾಡಬೇಕು. ಅದರಲ್ಲೂ ನಾವು ಒಂದೊಂದು ಇಂಚ್ರೆಸ್ಟ್ ಇಟ್ಟುಕೊಂಡು ಮಾತನಾಡುವು ದಾಗಲೀ ಅಥವಾ ಅಂಕ ಅಂಶಗಳನ್ನು ಯೋಜನೆ ಮಾಡದೆ ಮಾತನಾಡುವುದೇ ಆಗಲಿ ಸರಿ ಯಲ್ಲ. ಎಷ್ಟು ಹೊರೆ ಹೊರಿಸಿದ್ದಾರೆ, ಇದು ಸರಿಯೇ ಸರಿಯಲ್ಲವೇ ಎಂಬುದನ್ನು ನಾವು ಕೂಲಂಕಷವಾಗಿ ವಿಮರ್ಶಿಸಿ ತೀರ್ಮಾನಕ್ಕೆ ಬರಬೇಕಾಗಿದೆ.

**Sri S. SRINIVASA IYENGAR.**—Sir, I rise to a point of order. The Hon'ble Member said that Hon'ble Members having some vested interest were talking. I refute it, Sir. No Hon'ble Member has any vested interest. We discuss the Bill as such and the provisions of the report as such. The Hon'ble Member should not say that we have some vested interest. I refute it, Sir.

**Mr. SPEAKER.**—He has understood you.

**Sri S. SRINIVASA IYENGAR.**—If it gets into the record, it will reflect on us.

**Mr. SPEAKER.**—Your refutation will also be on record.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಹೀಗೆ ಅಂಕ ಅಂಶಗಳ ಮೇಲೆ ಈ ತೆರಿಗೆಯನ್ನು ವಿಧಿಸಬೇಕಾದ್ದು ಧರ್ಮ. ಒಂದು ಉದಾಹರಣೆಯನ್ನು ತಮ್ಮ ಮುಂದಿಡುತ್ತೇನೆ. ತುಮಕೂರು ಬಸ್‌ಸ್ಟ್ಯಾಂಡಿನಲ್ಲಿ ಒಂದು ಹೋಟೇಲಿದೆ. ಆ ಹೋಟೇಲಿನವರು ತಿಂಗಳಿಗೆ 440 ರೂಪಾಯಿಗಳನ್ನು ಮುನಿಸಿಪಾಲಿಟಿಯವರಿಗೆ ಕೊಡುತ್ತಿದ್ದಾರೆ. 440 ರೂಪಾಯಿಗಳನ್ನು ಒಂದು ತಿಂಗಳಿಗೆ ಕೊಡಬೇಕಾದರೆ ಅವರು ಎಷ್ಟು ಲಾಭ ಸಂಪಾದಿಸಬಹುದು, ಎಷ್ಟು ವ್ಯಾಪಾರವನ್ನು ಮಾಡ ಬಹುದೆಂಬುದನ್ನು ಈ ಸಭೆಯವರು ಯೋಚನೆ ಮಾಡ ಬೇಕು. ಇದನ್ನು ನೋಡಿದರೆ ಹೋಟೇಲು ಬಿಸಿನೆಸ್ಸಿಗೆ ಎಷ್ಟು ತೆರಿಗೆ ವಿಧಿಸಬೇಕೆಂಬುದನ್ನು ಕೂಡ ನಾವು ಯೋಚನೆಮಾಡಬೇಕಾಗಿದೆ. ಹೆಚ್ಚಿನ ಲಾಭದ ದೃಷ್ಟಿ ಯಿಂದ ಅವರು ಇದನ್ನು ವಹಿಸಿಕೊಂಡಿರುವಾಗ ಈಗ ವಿಧಿಸಿರುವ ತೆರಿಗೆ ಹೊರೆಯಾಗಿದೆಯೆ ಎಂಬುದನ್ನು ಯೋಚನೆಮಾಡಬಹುದಾಗಿದೆ.

ಸ್ವಾಮಿ, ಯುದ್ಧ ಕಾಲದಲ್ಲಿ ಒಂದು ರೂಪಾಯಿಗೆ ಮುಕ್ಕಾಲು ಸೇರು ಅಕ್ಕಿ, ಅರ್ಧ ಸೇರು ಅಕ್ಕಿ ಸಿಕ್ಕುತ್ತಿತ್ತು. ಪ್ರತಿಯೊಂದು ಪದಾರ್ಥಕ್ಕೂ ಕೂಡ ಒಂದಕ್ಕೆ ಮೂರರಷ್ಟು ಬೆಲೆಯಾಗಿತ್ತು. ಆ ಕಾಲದಲ್ಲಿ ಯಾರಾ ದರೂ ಒಂದು ಹೋಟೇಲನ್ನು ನಡೆಸಬೇಕೆಂದು ಮನಸ್ಸು ಮಾಡಿದರೆ ಅಷ್ಟು ಸುಲಭವಾಗಿ ಲೈಸೆನ್ಸ್ ಸಿಕ್ಕುತ್ತಿರ ಲಿಲ್ಲ. ಲೈಸೆನ್ಸ್ ಕೊಡುವುದು ಅಷ್ಟು ಸುಲಭವಾಗಿರ ಲಿಲ್ಲ. ಹೋಟೇಲಿನವರು ಬೇಕಾದಷ್ಟು ಸಂಪಾದನೆ ಮಾಡಿ ಸುಖವಾಗಿ ಜೀವನಮಾಡಿದರು. ಅನೇಕರು ನೂರಾರು ಲೈಸೆನ್ಸುಗಳನ್ನು ಮಾರಾಟಮಾಡಿರುವು ದನ್ನು ನಾವು 8–10 ವರ್ಷಗಳಿಂದ ನೋಡಿದ್ದೇವೆ. ಲೈಸೆನ್ಸುಗಳು ಅನೇಕ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರು ಗಳಲ್ಲೂ ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲೂ 4–5 ಸಾವಿರ ರೂಪಾಯಿಗಳವರೆಗೆ ಖರೀದಿಯಾಗಿದೆ; ಪಟ್ಟಣಗಳಲ್ಲಿ 10–20 ಸಾವಿರ ರೂಪಾಯಿಗಳವರೆಗೆ ಖರೀದಿಯಾಗಿದೆ.

ಈ ದಿನ ಪದಾರ್ಥಗಳ ಬೆಲೆ ಕಡಿಮೆಯಾಗುತ್ತಾ ಬರುತ್ತಿದೆ. ಹಿಂದಿನ ಬೆಲೆಗಿಂತಲೂ ಈಗಿನ ಖರ್ಚು ಕಡಮೆಯಾಗಿದೆ. ಯಾರು ಈಗ ಹೋಟೇಲ್ ನಡೆಸು ತ್ತಿರುವವರು ಹೆಚ್ಚಿನ ಲಾಭ ಪಡೆಯಬೇಕೆಂಬ ದೃಷ್ಟಿ ಯಿಂದ ತಿಂಡಿಪದಾರ್ಥಗಳಿಗೆ ಹೆಚ್ಚಿನ ಬೆಲೆ ಮಾತ್ರ ನಿಗದಿ ಮಾಡಿಕೊಂಡು ಕಡಿಮೆ ದರ್ಜೆಯ ಪದಾರ್ಥ ಗಳನ್ನು ಮಾಡುತ್ತಾರೆಯೋ ಅಂಥವರು ಕ್ರಮೇಣ ವ್ಯಾಪಾರವನ್ನು ಕಳೆದುಕೊಳ್ಳುತ್ತಿದ್ದಾರೆಯೇ ಹೊರತು ಉತ್ತಮ ದರ್ಜೆಯ ವ್ಯಾಪಾರಿಗೆ ವ್ಯಾಪಾರ ಕಡಮೆ ಯಾಗುತ್ತಿಲ್ಲ. ಆದರೂ ಈ ಹೋಟೇಲ್ ಮಾಲೀಕರಿಗೆ ಯಾವ ಮಟ್ಟದಲ್ಲಿ ಎಷ್ಟು ಸುಂಕವನ್ನು ಹಾಕಬೇಕೆಂಬು ದನ್ನು ಯೋಚಿಸಬೇಕು. ಈಗ ಸರ್ಕಾರದವರು ಸೂಚಿಸಿರತಕ್ಕ ಹತ್ತು ರೂಪಾಯಿ ಲಿಮಿಟ್ ದುಬಾರಿ ಯಾಗಿದೆಯೆಂದು ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ಹೇಳಿರುತ್ತಾರೆ. ಇದನ್ನ ಎಷ್ಟುಮಟ್ಟಿಗೆ ಕಡಮೆ ಮಾಡಬೇಕೆಂಬುದನ್ನು ಯೋಚಿಸಬೇಕಾಗಿದೆ.

ಇನ್ನು ಪವರ್‌ಲೂಂ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳಿರತಕ್ಕದನ್ನು ಒಪ್ಪುತ್ತೇನೆ. ಪವರ್‌ಲೂಂ ಬಟ್ಟೆಗೂ ಮಿಲ್ ಬಟ್ಟೆಗೂ ಒಂದೇ ವಿಧವಾದ ತೆರಿಗೆ ಯನ್ನು ವಿಧಿಸುವುದು ಸರಿಯಲ್ಲ. ಪವರ್‌ಲೂಂಗೆ ಹೆಚ್ಚಿಗೆ ಖರ್ಚಾಗುತ್ತದೆ. ಅಲ್ಲದೆ ಪವರ್‌ಲೂಂಗೂ, ಹ್ಯಾಂಡ್‌ಲೂಂಗೂ ಹೋಲಿಸಿದರೆ qualityಯಲ್ಲೇನೋ ಪವರ್‌ಲೂಂ ಬಟ್ಟೆ ಉತ್ತಮವಾಗಿದ್ದರೂ ಖರ್ಚು ಮೆಚ್ಚ ಹ್ಯಾಂಡ್‌ಲೂಂಗೆ ಜಾಸ್ತಿ ಬೀಳುತ್ತದೆ. ಆದಕಾರಣ ಮಾರ್ಕೆಟ್‌ನಲ್ಲಿ ಹ್ಯಾಂಡ್‌ಲೂಂ ಬಟ್ಟೆಗೆ ಪವರ್‌ಲೂಂ ಬಟ್ಟೆಗಿಂತಲೂ ಜಾಸ್ತಿ ಬೆಲೆ ಬೀಳುತ್ತದೆ.

ಇನ್ನು ಬೀಡಿ ಕೈಗಾರಿಕೆಯಲ್ಲಿ ನಿರತರಾಗಿರುವವರು ಬಹಳಮಂದಿ ಇದ್ದಾರೆ. ಅದರಲ್ಲಿ ಕೂಲಿ ಕೆಲಸದಲ್ಲಿ ನಿರತರಾಗಿರುವವರು ಬಹಳ ಮಂದಿ, ಇವರಿಗೆ ಧಕ್ಕೆ ತಗಲುತ್ತದೆ ಎಂಬ ವಾದ ನಮ್ಮ ಮುಂದಿದೆ. ಆದರೆ ಕೂಲಿ ಮಾಡತಕ್ಕವನಿಗೆ ಇದರಿಂದ ಯಾವ ವಿಧವಾದ ಧಕ್ಕೆಯೂ ಬರುವುದಿಲ್ಲ. ಇವನಿಗೆ ಒಂದು ಕಾಸಿನಷ್ಟು ಮಾತ್ರ ತೆರಿಗೆ ಹಾಕಿರುತ್ತಾರೆ. ಇದಕ್ಕಾಗಿ ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿಯವರು ಹೇಳಿದಹಾಗೆ 2–3 ಕಾಸು ಹಾಕಿದರೂ ಸರಿಯಾಗಿರುತ್ತದೆ ಎಂದು ಕಾಣುತ್ತದೆ. ನಮ್ಮ ದೇಶದಲ್ಲಿ ತಯಾರಾಗುವ ಬೀಡಿಯ 4 ರಷ್ಟು 10 ರಷ್ಟು ಹೊರಗಿನಿಂದ ಬರುತ್ತಿವೆ. ಆದುದರಿಂದ ಹೊರಗಿ

(ಶ್ರೀ ಟಿ. ಎಚ್. ಮೂಡಲಗಿರಿಗೌಡ.)

ನಿಂದ ಬರತಕ್ಕುದನ್ನು ತಡೆದುಹಾಕಿ, ಇಲ್ಲಿ ಈ ಕೈಗಾರಿಕೆಯಲ್ಲಿ ನಿರತರಾಗಿರುವವರಿಗೆ ಉತ್ತೇಜನ ಕೊಡಬೇಕಾದರೆ ಇನ್ನೊಂದೆರಡು ಕಾನು ಹೆಚ್ಚಿಸುವುದು ಒಳ್ಳೆಯದೆಂದು ನೂಚಿಸುತ್ತೇನೆ. (Hear! Hear!)

ಆಮೇಲೆ ಅಗರ್‌ಬತ್ತಿಯಮೇಲೆ ತೆರಿಗೆ ಹಾಕಿರತಕ್ಕದ್ದು.....

Sri A. BHEEMAPPA NAIK.—That kind of discriminatory legislation is not allowed. ವಿನಾಯಿತಿ ಕೊಟ್ಟಿದ್ದರೆ ಮಾತ್ರ ಅದಕ್ಕೆ ತೆರಿಗೆ ಬೀಳುವುದಿಲ್ಲ. If you make discriminatory legislation the Centre will not allow it.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಗರಬತ್ತಿ ವಿಚಾರದಲ್ಲಿ ಮಾತ್ರ ಬಹಳ ತೊಂದರೆಯಾಗುತ್ತದೆ ಎಂದು ಕೆಲವರು ಹೇಳಿದರು. ಈ ಪದಾರ್ಥವನ್ನು ಹೆಚ್ಚಾಗಿ ಶುಭಕಾರ್ಯಗಳಿಗೆ, ದೇವರ ಕಾರ್ಯಕ್ಕೆ ಉಪಯೋಗಿಸುತ್ತಾರೆ. ಆದುದರಿಂದ ಒಳ್ಳೆಯ ಕಾರ್ಯಕ್ಕಾಗಿ ಉಪಯೋಗಿಸುವ ಈ ಪದಾರ್ಥದ ಮೇಲೆ ಒಂದೆರಡು ಕಾನು ಹೆಚ್ಚಾಗಿ ಬಿದ್ದರೂ ಪರವಾಗಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಇದು ಒಂದು ಗೃಹ ಕೈಗಾರಿಕೆಯಲ್ಲ ಅತಿ ಮುಖ್ಯವಾದುದಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಶ್ರೀ ಭೀಮಪ್ಪ ನಾಯಕರಿಗೆ ಇದರ ಮೇಲೆ ಬಹಳ ಕನಿಕರವಿರುವಹಾಗಿದೆ. ಇರಲಿ, ಸಂತೋಷ.

Mr. SPEAKER.—He has appealed to your sympathy and you grant it?

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದರ ವಿಚಾರದಲ್ಲಿ ಮೂರು ಕಾನು ಕಡಿಮೆ ಮಾಡುವುದು ಉತ್ತಮವೆಂದು ಹೇಳುತ್ತೇನೆ.

ಇನ್ನೊಂದು ವಿಚಾರ. ಲೆಕ್ಕಗಳನ್ನು ತನಿಖೆಮಾಡುವ ಅಧಿಕಾರಿಗಳು ವ್ಯಾಪಾರಗಾರರಿಂದ ಅವುಗಳನ್ನು seize ಮಾಡತಕ್ಕದ್ದು ಅನ್ಯಾಯವೆಂದು ಕೆಲವರು ತಿಳಿಸಿರುತ್ತಾರೆ. ಆದರೆ ನಮ್ಮ ದೇಶದಲ್ಲಿ ಸರ್ಕಾರದವರು ಯಾವರೀತಿ ಸುಂಕವನ್ನು ವಿಧಿಸುತ್ತಾರೋ ಅದಕ್ಕನುಸಾರವಾಗಿ ಪ್ರತಿಯೊಬ್ಬರೂ ಕೊಡತಕ್ಕದ್ದು ವಿಧಿವತ್ತಾದುದು. ಈ ಭಾವನೆ ಬೆಳೆದರೇ ಕಾನೂನು ಬಿಕ್ಕಟ್ಟು ಸಹ ಅದಷ್ಟೂ ಕಡಿಮೆಯಾಗುತ್ತದೆಯೆಂದು ಹೇಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಆದರೆ ಪ್ರತಿಯೊಬ್ಬರೂ ಈ ರೀತಿ ಮಾಡುತ್ತಾರೆಯೇ ಎಂಬುದನ್ನು ನಾವು ಆಲೋಚಿಸಬೇಕು. ಈ ಲೆಕ್ಕಪತ್ರಗಳ ವಿಚಾರದಲ್ಲಿ ಯಾರು ತಪ್ಪು ಲೆಕ್ಕಪತ್ರಗಳನ್ನಿಟ್ಟಿರುತ್ತಾರೆಯೋ ಅವರಿಗೆ ಮಾತ್ರ ಈ ರೀತಿ ಸಂಬಂಧಪಟ್ಟ ಅಧಿಕಾರಿಗಳು seize ಮಾಡುವ ವಿಚಾರ ಅನ್ವಯಿಸುತ್ತದೆಯೇ ವಿನಾ ಎಲ್ಲರಿಗೂ ಇದು ಅನ್ವಯವಾಗುವುದಿಲ್ಲ. ಸರಿಯಾಗಿ ಲೆಕ್ಕಪತ್ರಗಳನ್ನು ಇಟ್ಟಿರುವವರ ವಿಚಾರದಲ್ಲಿಯೂ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಈ ಅಧಿಕಾರವನ್ನು ದುರುಪಯೋಗಪಡಿಸಿಕೊಂಡುದೇ ಆದರೆ ಅಂಥ ಅಧಿಕಾರಿ ಆ ಕೆಲಸಕ್ಕೆ ನಾಲಾಯಖ್ ಎಂಬುದು ಖಚಿತವಾಗಿ ವ್ಯಕ್ತವಾಗುತ್ತದೆ. ಎಲ್ಲೋ extraordinary ಸನ್ನಿವೇಶದಲ್ಲಿ ಈ ರೀತಿ ಆಗುತ್ತದೆಯೇ ಹೊರತು ಸಾಧಾರಣವಾಗಿ ಇಂಥ ಸಂದರ್ಭಗಳೇ ಒದಗುವುದಿಲ್ಲವೆಂದು ತಿಳಿಸಬೇಕಾಗಿದೆ. ಆದುದರಿಂದ ಸೆಲೆಕ್ಟ್ ಕಮಿಟಿಗೆ ಈ ಬಿಲ್ಲು ಹೋಗಬೇಕಾಗಿರುವುದರಿಂದ ಬಹುತೇಕವಾಗಿ ಸಮಿತಿಯವರು ಏನೊಂದು ವರದಿಯನ್ನು ಒಪ್ಪಿಸುತ್ತಾರೆಯೋ ಅದು ಮುಕ್ಕಾಲು ಮೂರುವೀಸೆ ಪಾಲು ತಿದ್ದುಪಡಿ ಮಸೂದೆಯಲ್ಲಿ ಅಡಕವಾಗಿದೆ. ಅದರೂ ಒಂದೆರಡು ವಿಚಾರಗಳನ್ನೂ ದೇಶದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ವಿಮರ್ಶೆಮಾಡಬೇಕಾಗಿದೆ. ಅದನ್ನು ಸರ್ಕಾರದವರು ಅಗತ್ಯವಾಗಿ ಮಾಡುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಈಗ ಅನೇಕ ಜನರು ಹೊಸದಾಗಿ ವಿಧಿಸಿರುವ ತೆರಿಗೆಯ ವಿಚಾರವಾಗಿ ಈ ಬಿಲ್ಲಿನ ಮೇಲೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಬಿಲ್ಲಿನ ಬಗ್ಗೆ ಕೂಲಂಕಷವಾಗಿ ಎಲ್ಲ ವಿಚಾರಗಳನ್ನೂ ಪರಿಶೀಲಿಸಲು ಸೆಲೆಕ್ಟ್ ಕಮಿಟಿಗೆ refer ಆಗುವುದನ್ನು ತಿಳಿದು ಎಲ್ಲರಿಗೂ ಬಹಳ ಸಂತೋಷವಾಯಿತು. ಆ ಮೇಲೆ ವರ್ತಕರೆಲ್ಲರೂ ಸೇರಿ ಇದರಲ್ಲಿ ಹಲವಾರು ಲೋಪದೋಷಗಳಿವೆ, ಅವುಗಳನ್ನು ತಿದ್ದುಪಾಟು ಮಾಡಬೇಕೆಂದು ಕೇಳಿದರು. ಇದು ಹೇಗಿದ್ದರೂ ಸೆಲೆಕ್ಟ್ ಕಮಿಟಿಯ ಪರಿಶೀಲನೆಗೆ ಹೋಗುವುದರಿಂದ ಇಡೀ ದೇಶದ ಹಿತದೃಷ್ಟಿಯಿಂದ, ಜನತೆ ಹಿತದೃಷ್ಟಿಯಿಂದ ಏನು ಅವಶ್ಯಕ ತಿದ್ದುಪಡಿ ಆಗಬೇಕೋ ಅದನ್ನು ಸರ್ಕಾರದವರು ಮಾಡುತ್ತಾರೆಂದು ನಾನು ನಂಬಿದ್ದೇನೆ. ಅಲ್ಲದೆ, ಅನೇಕ ವರ್ತಕರು single point levy system ಸೂಕ್ತವೆಂದು ಅಭಿಪ್ರಾಯ ಪಟ್ಟಿದ್ದಾರೆಂಬ ಅಂಶವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಹಲವು ಮಂದಿ ಸದಸ್ಯರು ಹೋಟೇಲ್ ಮೇಲೆ ವಿಧಿಸಿರತಕ್ಕ ತೆರಿಗೆ ಬಹಳ ದುಬಾರಿಯೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ನಾನು ಇಡೀ ದೇಶದ ಮಹಿಳೆಯರ ಪರವಾಗಿ ಈ ವಿಚಾರದಲ್ಲಿ ಒಂದೆರಡು ಅಂಶಗಳನ್ನು ಹೇಳುತ್ತೇನೆ. ನಮ್ಮ ಪುರುಷರಿಗೆ ಮನೆ ಅಡಿಗೆ ರುಚಿಸುವುದಿಲ್ಲ. ಹೋಟೇಲುಗಳಿಂದ ಈ ದುಃಸ್ಥಿತಿ ಅವರಿಗೆ ಲಭಿಸಿದೆ. ಮನೆಯಲ್ಲಿ ಏನಾದರೂ ಸ್ವಲ್ಪ ತಡವಾಯಿತೆಂದರೆ ಪರವಾಗಿಲ್ಲ, ಹೋಟೇಲಿನಲ್ಲಿ ಊಟಮಾಡಿಕೊಂಡು ಹೋಗುತ್ತೇನೆಂದು ಕಾರ್ಯಗಾರವದ ಮೇಲೆ ಹೊರಟುಬಿಡುತ್ತಾರೆ. (ನಗು!) ಇದರನಲುವಾಗಿ ಮನೆ ಹೆಂಗಸರು ಸೋಮಾರಿಗಳಾಗುವುದಕ್ಕೂ ಅವಕಾಶವಾಗಿದೆ. ಈ ಹೋಟೇಲಿನವರ ಕಾಟ ಕಡಮೆಯಾಗುವುದಕ್ಕೆ ಸರ್ಕಾರದವರು ಈಗ ವಿಧಿಸಬೇಕೆಂದಿರುವ ತೆರಿಗೆ ಸರಿಯಾಗಿದೆ. ನನಗೇನೂ ಹೋಟೇಲಿನವರ ಮೇಲೆ ಆಕ್ಷೇಪವಿಲ್ಲ. ಇವರು ಎಫೇಜ್ಞವಾಗಿ ಲಾಭ ಸಂಪಾದನೆ ಮಾಡುತ್ತಿರುವಾಗ ಇವರೇಕೆ ಈ ತೆರಿಗೆಯ ಭಾರವನ್ನು ಹೊರಲು ಹೆದರಬೇಕೋ ನನಗೆ ಅರ್ಥವಾಗುವುದಿಲ್ಲ.

ಇನ್ನು ಊದುಬತ್ತಿ ವಿಚಾರ ಪ್ರಸ್ತಾಪಿಸಿದ್ದಾರೆ. ಈ ಗೃಹ ಕೈಗಾರಿಕೆ ಕೇವಲ ಹೆಣ್ಣುಮಕ್ಕಳ ಸಹಾಯದಿಂದಲೇ ಎಫೇಜ್ಞವಾಗಿ ನಡೆಯುತ್ತಿದೆ. ಇದನ್ನು ದೇವಕಾರ್ಯಕ್ಕೆ ಬೇರೆ ಉಪಯೋಗಿಸುತ್ತಾರೆ. ಆದುದರಿಂದ ಇದರ ಮೇಲೆ ದುಬಾರಿ ತೆರಿಗೆ ವಿಧಿಸುವುದು ಸೂಕ್ತವಾದುದಲ್ಲ, ಇದನ್ನು ಸೆಲೆಕ್ಟ್ ಕಮಿಟಿಯವರು ಪರಿಶೀಲಿಸಿ ಸೂಕ್ತ ಬದಲಾವಣೆ ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

6-30 P.M.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಿಗೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, 1954ನೇ ಇಸವಿ ಮೈಸೂರು ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯನ್ನು ಈಗಾಗಲೇ ಮಹನೀಯರು ಚರ್ಚೆಮಾಡಿದ್ದಾರೆ. ಚರ್ಚೆ ಮಾಡಿದ ಮೇಲೆ ಯಾವ

ಒಂದು ವಿಚಾರದಲ್ಲಿ ಮಾತನಾಡದೆ ಬಿಟ್ಟಿದ್ದಾರೋ ಆ ವಿಚಾರದಲ್ಲಿ ಮಾತ್ರ ನಾನು ಪ್ರಸ್ತಾಪ ಮಾಡಬೇಕೆಂದು ಇದ್ದೇನೆ. ಏಕೆಂದರೆ ನನ್ನ ಕರ್ತವ್ಯದೃಷ್ಟಿಯಿಂದ ಅದನ್ನು ಹೇಳುವುದು ಅನಿವಾರ್ಯ ಎಂದು ತಿಳಿದು ಕೊಂಡಿದ್ದೇನೆ. ಈಗ ಕಾಫೀ ಮೇಲೆ ಹೆಚ್ಚಾಗಿ ಸೇಲ್ಸ್ ಟ್ಯಾಕ್ಸ್ ಹಾಕಿದ್ದಾರೆ. ವ್ಯಾಪಾರ ದೃಷ್ಟಿಯಿಂದ ಇಂಡಿಯನ್ ಕಾಫಿ ಬೋರ್ಡ್ ಮುಖಾಂತರ ಎಲ್ಲಾ ಕಡೆಯೂ ಕಾಫಿ ಒಂದು ನಿಗದಿಯಾದ ಬೆಲೆ ಮೇಲೆ ಮಾರಾಟವಾಗುತ್ತಾ ಇರುವಾಗ ಒಂದು ಕಡೆ ಹೆಚ್ಚು ಒಂದು ಕಡೆ ಕಡಮೆ ಸೇಲ್ಸ್ ಟ್ಯಾಕ್ಸ್ ಇದ್ದರೆ ಅದರಿಂದ ಎಷ್ಟುಮಟ್ಟಿಗೆ ಆ ವ್ಯಾಪಾರಕ್ಕೆ ಧಕ್ಕೆ ಬರುತ್ತದೆ ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಈ ವ್ಯಾಪಾರದಿಂದ ಸರ್ಕಾರದವರಿಗೆ ಎಷ್ಟು ಮಟ್ಟಿಗೆ ವರಮಾನ ಬರುತ್ತಾ ಇದೆ ಎಂಬುದನ್ನು ಸ್ವಲ್ಪ ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಒಂದು ಪೌಂಡ್ ಸಿಂಗಲ್ ಪಾಯಿಂಟ್ ಮೇಲೆ ಟ್ಯಾಕ್ಸ್ ಹೆಚ್ಚಿಸಿದ ಪಕ್ಷದಲ್ಲಿ ಎಷ್ಟು ವರಮಾನ ಬರುತ್ತಾ ಇದೆಯೋ ಅದಕ್ಕಿಂತ ಕಡಮೆಯಾಗುತ್ತದೆ ಎಂದು ಹೇಳುತ್ತೇನೆ. ಈಗಾಗಲೇ ನಾವು ಪರದೇಶಕ್ಕೆ ನಮ್ಮ ಕಾಫಿಯನ್ನು ಕಳುಹಿಸುತ್ತಾ ಇದ್ದೇವೆ. ಅದರಿಂದ ಹೆಚ್ಚು ಲಾಭ ಬರುತ್ತಾ ಇದೆ. ಒಂದು ವೇಳೆ ನಾವು ಈ ಸೇಲ್ಸ್ ಟ್ಯಾಕ್ಸ್ ಹಾಕಿದ ಪಕ್ಷದಲ್ಲಿ ಬೊಂಬಾಯಿ ಮತ್ತು ಮದರಾಸು ಈ ಪ್ರಾಂತ್ಯಗಳವರು ಇತರ ದೇಶ ಗಳಿಂದ ಕಾಫಿ ಆಮದು ಮಾಡಿಕೊಂಡು ನಮ್ಮ ವ್ಯಾಪಾರ ಕಡಮೆಯಾಗಿ ನಮ್ಮ ವರಮಾನ ಕಡಿಮೆ ಯಾಗುತ್ತದೆ. ಇನ್ನು ಹೆಚ್ಚಿಗೆ ಹೇಳುವುದಕ್ಕೆ ಹೋಗು ವುದಿಲ್ಲ. ಈಗ ಇರತಕ್ಕ ಮಲ್ಟಪಾಯಿಂಟ್ ಟ್ಯಾಕ್ಸ್‌ನ್ನು ಮುಂದುವರಿಸಬೇಕೆಂದು ಹೇಳುತ್ತೇನೆ.

ಈಗಾಗಲೇ ಊದುಬತ್ತಿ ಮತ್ತು ಬೀಡಿಗಳಿಗೆ ಎಕ್ಸೆಮ್ಪ್ಷನ್ ಮಾಡಬೇಕೆಂದು ಅನೇಕ ಸದಸ್ಯರು ಹೇಳಿದ್ದಾರೆ. ಆ ರೀತಿ ಎಕ್ಸೆಮ್ಪ್ಷನ್ ಮಾಡುವುದು ಬೀಡಿ ಕುಡಿಯುವವರ ದೃಷ್ಟಿಯಿಂದ ಮತ್ತೆ ಕೂಲಿಗಾರರ ಹಿತದೃಷ್ಟಿಯಿಂದ ಒಳ್ಳೆಯದು ಎಂದು ಹೇಳುತ್ತೇನೆ. ಏಕೆಂದರೆ ಈಗ ಸಾಮಾನ್ಯವಾಗಿ ಪ್ರತಿ ಮನೆಯಲ್ಲೂ ಯಾರಾದರೂ ಮನೆಗೆ ಹೋದರೆ ಮರ್ಯಾದೆಗೆ ಒಂದು ಬೀಡಿ ಕೊಡುವುದು ಪದ್ಧತಿಯಾಗಿದೆ. ಆದ್ದರಿಂದ ಬೀಡಿ ಮತ್ತು ಊದುಬತ್ತಿ ಇವನ್ನು ಬಡವರು ಪ್ರತಿ ಯೊಬ್ಬರೂ ಉಪಯೋಗಿಸುತ್ತಾರೆ. ಕೇವಲ ನಿರ್ಗತಿ ಕರೂ ಸಹ ಊದುಬತ್ತಿ ಉಪಯೋಗಿಸುತ್ತಾರೆ ಮತ್ತು ಇದು ಒಂದು ಗೃಹ ಕೈಗಾರಿಕೆಯಾಗಿದೆ. ಸರ್ಕಾರದವರು ಎಷ್ಟೋ ದುಡ್ಡು ಖರ್ಚುಮಾಡಿ ನಾವು ಪಾಶ್ಚಿಮಾತ್ಯ ದೇಶಗಳವರ ಮಟ್ಟಕ್ಕೆ ಬರಬೇಕೆಂದು ಹೇಳುತ್ತಾ ಇರುವಾಗ, ಈ ರೀತಿ ಒಂದು ಕಡೆ ಹೆಚ್ಚು ಹಣ ಖರ್ಚುಮಾಡುತ್ತಿದ್ದು ಇನ್ನೊಂದು ಕಡೆ ಹೆಚ್ಚು ಟ್ಯಾಕ್ಸ್ ಹಾಕಿ ಕೈಗಾರಿಕೆಗಳಿಗೆ ಧಕ್ಕೆ ಬರುವಂತೆ ಮಾಡುವ ನೀತಿ ಸರಿಯಲ್ಲ ಎಂದು ಹೇಳುತ್ತೇನೆ. ಗೃಹ ಕೈಗಾರಿಕೆಗೆ ಉತ್ತೇಜನ ಕೊಡಬೇಕಾದರೆ ಈ ರೀತಿ ಟ್ಯಾಕ್ಸ್ ಹಾಕುವ ನೀತಿ ಸರಿಯಲ್ಲ ಎಂದು ಹೇಳು ತ್ತೇನೆ. ಹೋಟೇಲುಗಳಿಗೂ ಕೂಡ ಮೊದಲು ಜಾಸ್ತಿ ಹಾಕಿದ್ದು ಈಗ ಸ್ವಲ್ಪ ಕಡಮೆಮಾಡಿರುವುದು ಬಹಳ ಸಂತೋಷ. ಶೇಕಡ 3 ರಂತೆ ಮಾಡಬೇಕೆಂದು ಹೇಳುತ್ತಾ ಇದ್ದೀರಿ. ಈಗ 7½ ಸಾವಿರ ರೂಪಾಯಿ turnover fix ಮಾಡಿರುವುದು ಬಹಳ. 10 ಸಾವಿರ ರೂಪಾಯಿ turnover ಗೆ ಮೇಲ್ಪಟ್ಟು ಶೇಕಡ 3 ರಂತೆ fix ಮಾಡುವುದು ಉತ್ತಮ ಎಂದು ಈ ಸಮಯ ದಲ್ಲಿ ಹೇಳುತ್ತೇನೆ.

**Sri A. BHEEMAPPA NAIK.**—It cannot be levied on textiles that come into Mysore State ?

**Mr. SPEAKER.**—That is his suggestion. It is for the Select Committee to consider.

ಶ್ರೀ ಜಿ. ಪುಟ್ಟಸ್ವಾಮಿ.—ನಮ್ಮ ದೇಶದ ವರಮಾನದ ದೃಷ್ಟಿಯಿಂದ ಈ ಟ್ಯಾಕ್ಸ್ ಹಾಕುವುದು ಅನಿವಾರ್ಯ ಎಂಬುದನ್ನು ಘಂಟಾಘೋಷವಾಗಿ ಹೇಳುತ್ತೇನೆ. ಟ್ಯಾಕ್ಸ್ ಹಾಕಬಾರದು ಎಂದು ಹೇಳುವುದಿಲ್ಲ. ನಮ್ಮ ಆಡಳಿತದ ಯಂತ್ರ ನರಿಯಾದ ರೀತಿಯಲ್ಲಿ ಪರಿಶೀಲನೆ ಮಾಡಿ ಯಾವ ರೀತಿ ಟ್ಯಾಕ್ಸ್ ಹಾಕಬೇಕು ಎಂಬುದನ್ನು ನಲಹೆ ಮಾಡಿದ್ದರೆ ಚೆನ್ನಾಗಿತ್ತು. ಇಷ್ಟು ಏವಾದಕ್ಕೆ ಅವಕಾಶವಾಗುತ್ತಾ ಇರಲಲ್ಲ ಎಂದು ಹೇಳುತ್ತೇನೆ. ಈ ರೀತಿ ಕೆಲವಕ್ಕೆ ತೆರಿಗೆಯನ್ನು ಹೆಚ್ಚಿಸುವುದಕ್ಕೆ ಬದಲಾಗಿ ಯಾವುದಾದರೂ ಒಂದು ಹೊಸ ವಸ್ತುವಿನ ಮೇಲೆ ಟ್ಯಾಕ್ಸ್ ವಿಧಿಸಿದ್ದ ಪಕ್ಷದಲ್ಲಿ ಈಗ ಎಷ್ಟು ನಿರೀಕ್ಷೆ ಮಾಡಿದ್ದೇವೆಯೋ ಅದಕ್ಕಿಂತ 10 ರಷ್ಟು ಬರುತ್ತಾ ಇತ್ತು ಎಂದು ತಿಳಿಸಲು ಬಯಸುತ್ತೇನೆ. ಪರ್‌ಲೂಂ ಬಚ್ಚೆ ಹೊರಗಡೆಯಿಂದ ನೂರಾರು ಬೇಲುಗಳು ಬರುತ್ತವೆ. ಆ ಬೇಲುಗಳಿಗೆ ಕೊನೇ ಪಕ್ಷ ಒಂದು ಆಣೆಯಂತೆ ಹಾಕಿದರೂ ಕೂಡ ಸಾವಿರಾರು ರೂಪಾಯಿ ವರಮಾನ ಹೊರಗಡೆಯಿಂದ ಬರತಕ್ಕ ಪರ್‌ಲೂಂನಿಂದ ಬರುತ್ತದೆ. ಹೀಗೆಯೇ ಅನೇಕ ವಸ್ತುಗಳ ಮೇಲೆ ಇನ್ನು ಯಾವ್ಯಾವುದು ಬರ ಬಹುದು ಎಂಬುವುದನ್ನು ತನಿಖೆ ಮಾಡಿ ಈ ಸಭೆಯ ಸದಸ್ಯರಿಂದ ಏರ್ಪಟ್ಟ ಒಂದು ಸಮಿತಿಯ ಸದಸ್ಯರು ಸರ್ಕಾರದವರಿಗೆ ವರದಿ ಕೊಡಬೇಕೆಂದು ಹೇಳುತ್ತೇನೆ. ಇರುವುದನ್ನು ಮುಂದುವರಿಸಿಕೊಳ್ಳುವುದಕ್ಕಿಂತಲೂ ಬೇರೆ ಯಾವುದಾದರೂ ಮಾಲುಗಳ ಮೇಲೆ ತೆರಿಗೆ ಹಾಕಿ ಸರ್ಕಾರಕ್ಕೆ ಹೆಚ್ಚು ವರಮಾನ ಬರುವಂತೆ ಮಾಡಿ ಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುನೂಚಿತ ಜಾತಿಗಳು).—ಸ್ವಾಮಿ, ಮೈಸೂರು ದೇಶದ 1954ನೇ ಇಸವಿ ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯ ಮೇಲೆ ಈಗಾಗಲೇ ಕೆಲವು ಮಂದಿ ಪರವಾಗಿಯೂ ಮತ್ತು ವಿರೋಧವಾಗಿಯೂ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ನಾನಾದರೂ ಈ ಸಂದರ್ಭದಲ್ಲಿ ಹೆಚ್ಚು ಮಾತನಾಡಬೇಕೆಂದು ಇಷ್ಟ ಪಟ್ಟವನಲ್ಲ. ಆದರೂ ಸಹ ನಮ್ಮ ಹೋಟೇಲ್ ಮಾಲೀಕರು ಶ್ರೀ ವಿ. ಆರ್. ನಾಯ್ಡುರವರು ಮಾತನಾಡಿದ ಮೇಲೆ ನಾನೂ ಕೂಡ ನನ್ನ ಕರ್ತವ್ಯ ಮಾಡಬೇಕೆಂದು ಹೇಳಿ ನಿಂತಿದ್ದೇನೆ. ಮೈಸೂರು ಸೇಲ್ಸ್‌ಟ್ಯಾಕ್ಸ್ ಕಮಿಟಿಯನ್ನು ಸರ್ಕಾರದವರು ರಚಿಸುವಾಗ ಕಮಿಟಿಯವರಿಗೆ ಅವರು ಒಂದು ಡೈರೆಕ್ಷನ್ ಕೊಟ್ಟಿದ್ದರು. ಹಾಲು ಇರತಕ್ಕ ಸೇಲ್ಸ್‌ಟ್ಯಾಕ್ಸ್ ಆಕ್ಟಿನಲ್ಲಿ ಏನು ನ್ಯೂನತೆ ಇದೆ ಅದನ್ನು ತಪ್ಪಿಸಿ ಆದಷ್ಟು ತೊಂದರೆಗಳನ್ನು ಕಡಮೆ ಮಾಡಿ, ಆ ಬಾಬು ನಿಂದ ಸರ್ಕಾರದವರಿಗೆ ಬರತಕ್ಕಂಥ ಉತ್ಪನ್ನವನ್ನು ಬರಮಾಡಿಕೊಳ್ಳಬೇಕು. ಅದಕ್ಕೆ ನೂಕ್ತವಾದ ನಲಹೆ ಕೊಡಬೇಕೆಂದು ತಿಳಿಸಿದ್ದರು. ಅದೇ ರೀತಿ ಕಮಿಟಿಯ ವರೂ ಸಹ ಹತ್ತಾರುಸಾರಿ ಮೀಟಿಂಗ್ ಕರೆದು, ಚರ್ಚೆ ಮಾಡಿ ತಮ್ಮ ವರದಿಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ವರದಿಯಲ್ಲಿ ಅವರು ಕೆಲವು essential articles exempted from sales tax ಎಂದು

(ಶ್ರೀ ಬಿ. ರಾಚಯ್ಯ.)

ಹೇಳಿ ಒಂದು ಪಟ್ಟಿಯನ್ನು ಕೂಡ ಕೊಟ್ಟಿದ್ದಾರೆ. Amending ಬಿಲ್‌ನಲ್ಲಿ ಆ ರೀತಿ ಆದ ಒಂದು enclosure ಇಲ್ಲದೇ ಇರುವುದನ್ನು ನೋಡಿದರೆ ಆ ರೀತಿ ಎಕ್ಸೆಮ್ಪ್ಟ್ ಮಾಡುತ್ತಾರೆಯೋ ಇಲ್ಲವೋ ಅಥವಾ ಇನ್ನೇನಾದರೂ ಮಾಡುತ್ತಾರೆಯೋ ಎಂಬ ಸಂಶಯ ನಮಗೆ ಉಂಟಾಗಿದೆ. ಈ ಬಿಲ್ಲು ಸೆಲೆಕ್ಟ್ ಸಮಿತಿಗೆ ಹೋಗುತ್ತದೆ ಎಂದು ತಿಳಿದುಬಂದಿರುವುದರಿಂದ ಸೆಲೆಕ್ಟ್ ಸಮಿತಿಯವರು ಮುಂದೆ ಈ ಒಂದು ಪಟ್ಟಿಯನ್ನು ಸೇರಿಸಬೇಕೆಂದು ನಾನು ಈ ಮೂಲಕ ತಿಳಿಸುತ್ತೇನೆ.

ಆಂಕಿ ಅಂಶಗಳನ್ನು ಶೇಖರಿಸುವ ಉದ್ದೇಶದಿಂದಲೂ ಮತ್ತು ಸರ್ಕಾರಕ್ಕೆ ಉತ್ಪನ್ನ ಕಡಮೆ ಆಗದೇ ಇರುವ ರೀತಿಯಲ್ಲಿ ಮಾಡುವುದಕ್ಕೂ ಈ ವ್ಯಾಪಾರಗಾರರು ಯಾರ್ಯಾರು ಇದ್ದಾರೆ ಅವರೆಲ್ಲರೂ ವರ್ಷಕ್ಕೆ 8 ರೂಪಾಯಿ ಕೊಟ್ಟು ರಿಜಿಸ್ಟರ್ ಮಾಡಿಕೊಳ್ಳಬೇಕೆಂದು ಹೇಳಿ ವರದಿಮಾಡಿದ್ದಾರೆ. ಆದರೆ ಸರ್ಕಾರದವರು ಈ ಅಮೆಂಡಿಂಗ್ ಬಿಲ್‌ನಲ್ಲಿ ಯಾವ ಒಂದು ಸೂಚನೆಯನ್ನೂ ಆ ಬಗ್ಗೆ ತೋರಿಸಿಲ್ಲ. ಇದೇನು ಅಷ್ಟು ಹೆಚ್ಚಿನ ಹೊರೆ ಆಗುವುದಿಲ್ಲ, ಇದನ್ನು ಮಾಡಬೇಕಾಗಿತ್ತು ಎಂದು ತಿಳಿಸುತ್ತಾ ಇದ್ದೇನೆ.

ಇನ್ನು ಸ್ಲ್ಯಾಬ್‌ರೇಟ್ ಎಂದು ಹೇಳಿ ವರ್ಷ ಒಂದಕ್ಕೆ ಇಷ್ಟು ವ್ಯಾಪಾರ ತೆರಿಗೆ ಕೊಡಬೇಕೆಂದು ಸಮಿತಿಯವರು ಏನು ಶಿಫಾರಸು ಮಾಡಿದ್ದಾರೆ ಅದು ಒಂದು ಹೆಚ್ಚಿನ ಬದಲಾವಣೆಯಾಗಿ ಸಂಸ್ಥಾನಾಮಳೆ ಈ ಮಾನ್ಯ ಸಭೆಯ ಸದಸ್ಯರಲ್ಲೂ ಮತ್ತು ಜನ ಸಾಮಾನ್ಯದ ಮನಸ್ಸಿನಲ್ಲೂ ಒಂದು ಹೆಚ್ಚಿನ ಕಳವಳವನ್ನು ಉಂಟುಮಾಡಿದೆ. ಆ ರೀತಿ ಮಾಡಿದ್ದು ಸಮಂಜಸವಾಗಿಲ್ಲ ಎಂದು ತಿಳಿಸುತ್ತೇನೆ. ಒರಿಜಿನಲ್ ಆಕ್ಟ್‌ನಲ್ಲಿ ಸರ್ಕಾರಿ ಅಧಿಕಾರಿಗಳ ಮುಂದೆ ಡಿಫಾಲ್ಟರ್ಸ್ ತಮ್ಮ ಹೇಳಿಕೆಯನ್ನು ಸಮಿಜಾಯಿಷಿ ಕೊಡಲು ಅವಕಾಶ ಇದೆ. ಈಗ constitution of the tribunal is necessary ಎಂದು ಹೇಳಿ ಸಮಿತಿಯವರು ಶಿಫಾರಸುಮಾಡಿದ್ದರೂ ಕೂಡ ಈ ಅಮೆಂಡಿಂಗ್ ಬಿಲ್‌ನಲ್ಲಿ ಆ ಒಂದು ಪ್ರೊವಿಜ್ ಇಲ್ಲದೇ ಇರುವುದರಿಂದ ಅದು ವ್ಯಾಪಾರಸ್ಥರೆಲ್ಲರಿಗೂ ಒಂದು ಕಿರುಕುಳ ಇದ್ದ ಹಾಗೇ ಎಂದು ನಾನು ತಿಳಿದುಕೊಂಡಿದ್ದೇನೆ.ಅಧಿಕಾರಿಗಳಿಂದ ವ್ಯಾಪಾರಸ್ಥರಿಗೆ ಆಗತಕ್ಕ ಕಿರುಕುಳವನ್ನು ತಪ್ಪಿಸುವುದಕ್ಕೆ ಟ್ರಿಬ್ಯೂನಲ್ ನೇಮಕಮಾಡಬೇಕೆಂದು ಶಿಫಾರಸುಮಾಡಿದ್ದರೂ ಅದು ಅಮೆಂಡಿಂಗ್ ಬಿಲ್ಲಿನಲ್ಲಿ ಇಲ್ಲದೇ ಇರತಕ್ಕದ್ದು ಯಾರಿಗೂ ತೃಪ್ತಿಯನ್ನುಂಟು ಮಾಡಿಲ್ಲ. ಇದನ್ನು ಸೆಲೆಕ್ಟ್ ಸಮಿತಿಯವರು ಮುಂದೆ ಪರ್ಯಾಲೋಚನೆಮಾಡಬೇಕೆಂದು ಈ ಮೂಲಕ ನಲಹೆ ನೀಡುತ್ತೇನೆ.

ಶ್ರೀ ವಿ. ಆರ್. ನಾಯ್ಡುರವರು, ಸರ್ಕಾರದವರಿಗೂ, ಸಮಿತಿಯವರಿಗೂ ಹೋಟೇಲ್‌ನವರ ಮೇಲೆ ಒಂದು ಹೆಚ್ಚಿನ ಕಣ್ಣು ಬಿದ್ದಿದೆ ಎಂದು ತಿಳಿಸಿದರು. ಇದು ಸ್ವಭಾವಿಕ. ಹೋಟೇಲುಗಳ ಮಾಲೀಕರು ತಮ್ಮ ಒಂದು ಪ್ರಭಾವವನ್ನು ಎಲ್ಲಾ ಸದಸ್ಯರ ಮೇಲೂ ಮತ್ತು ಸರ್ಕಾರದಮೇಲೂ ಬೀರಿದ ಪರಿಣಾಮವಾಗಿ ಈ ರೀತಿ ಈ ಮಾನ್ಯ ಸಭೆಯಲ್ಲಿ ಹೋಟೇಲ್ ಮಾಲೀಕರಿಗೆ ಹೆಚ್ಚಿನ ತೊಂದರೆಯಾಗಿದೆ ಎಂದು ಹೇಳಿ ಒಂದು ಹೆಚ್ಚಿನ ರೀತಿಯಲ್ಲಿ ಹೇಳುವುದಕ್ಕೆ ಅವಕಾಶವಾಯಿತು ಎಂದು ತಿಳಿದುಕೊಂಡಿದ್ದೇನೆ. ರೈತರಮೇಲೆ ತೆರಿಗೆ ಹಾಕಿದಾಗ ಯಾವ ರೈತರು ಈ ರೀತಿ ನಮ್ಮ ರಕ್ಷಣೆಗೆ ಬನ್ನಿ ಎಂದು ಹೇಳಿ ಒಂದು ಹೆಚ್ಚಿನ ಸಂಖ್ಯೆಯಲ್ಲಿ ಈ ಹೋಟೇಲ್ ಮಾಲೀಕರುಗಳು ಬಂದು ಕುಳಿತಿರುವ ರೀತಿಯಲ್ಲಿ ಕುಳಿತಿದ್ದರು ಎಂದು ಕೇಳಿತ್ತೇನೆ. ಶ್ರೀ ನಾಯ್ಡುರವರು ಹೇಳುತ್ತಿದ್ದಾಗ ನಾನು ಗಮನವಿಟ್ಟು ಕೇಳಿದೆ. ಹಳ್ಳಿಯಲ್ಲರ ತಕ್ಕ ರೈತರು ಹೆಚ್ಚಿನ ರೀತಿಯಲ್ಲಿ ದವಸಧಾನ್ಯಗಳನ್ನು ಬೆಳೆದು ಲಾಭ ಸಂಪಾದನೆಮಾಡಿದ್ದಾರೆಂದು ಹೇಳಿದರು. ಅವರು ಹಳ್ಳಿಯಲ್ಲರತಕ್ಕ ರೈತರ ಪರಿಸ್ಥಿತಿ ನೋಡಿದ್ದಪಕ್ಷದಲ್ಲಿ ಅವರ ಕಷ್ಟ ಎಷ್ಟುಮಟ್ಟಿಗೆ ಇದೆ ಎಂಬುದು ಗೊತ್ತಾಗುತ್ತಿತ್ತು. ಹೋಟೇಲ್ ಪ್ರೊಪ್ರೈಟರಾಗಿ ಮೆತ್ತನೆ ಕುರ್ಚಿಮೇಲೆ ಕುಳಿತು ಕೊಂಡು ಲಾಭ ಸಂಪಾದನೆ ಮಾಡುವುದಕ್ಕೂ, ರೈತನಾಗಿ ಭೂಮಿ ಉತ್ತು, ಬೆವರು ಸುರಿಸಿ, ನಾಟಿಹಾಕಿ, ಬೆಳೆ ಬೆಳೆದು ಸಂಪಾದನೆ ಮಾಡುವುದಕ್ಕೂ ಇರುವ ವ್ಯತ್ಯಾಸ ರೈತರ ಸ್ಥಿತಿ ನೋಡಿದ್ದರೆ ಅವರಿಗೆ ಗೊತ್ತಾಗುತ್ತಾ ಇತ್ತು ಎಂದು ತಿಳಿಸುತ್ತೇನೆ. ಅವರ ಮೇಲೆ ಕೋಪಪಡಿಂದ ಹೇಳುತ್ತಾ ಇಲ್ಲ. ಅವರು ಹಳ್ಳಿಯ ರೈತರಿಗೆ ಏನೂ ಕಷ್ಟ ಇಲ್ಲವೇ ಇಲ್ಲ, ಹೋಟೇಲ್ ಮಾಲೀಕರಿಗೇ ಎಲ್ಲಾ ಕಷ್ಟ ಇರುವುದು, ಜೀವನಕ್ಕೆ ಬೇರೆ ಮಾರ್ಗ ಇಲ್ಲ, unemployment problem ಜಾಸ್ತಿಯಾಗುತ್ತದೆ ಎಂದು ಹೇಳಿದರು. ಈಗ ಏನಾಗಿದೆ ಎಂದರೆ ಈ ಹೋಟೇಲ್ ಮಾಲೀಕರು ತಮಗೆ ಬರತಕ್ಕ ಲಾಭದಲ್ಲಿ ಸರ್ಕಾರದವರಿಗೆ ಈ ಒಂದು ತೆರಿಗೆ ಕೊಡಬೇಕಾಗಿದೆ. ಈ ದೃಷ್ಟಿಯಿಂದ ಅವರಿಗೆ ಹೆಚ್ಚಿನ ಕಿರುಕುಳ ಆಗಿದೆ ಎಂದು ತಿಳಿದು ಕೊಂಡಿದ್ದೇನೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಹೇಳಿದ ಹಾಗೆ ಸಂಸ್ಥಾನಾಮಳೆ ಎಷ್ಟೋ ಹೊಟೇಲುಗಳಿವೆ. ಎಲ್ಲರಿಗೂ ಇದರಿಂದ ತೊಂದರೆ, ಎಲ್ಲರಿಗೂ ನಷ್ಟವಾಗುತ್ತಾ ಇದೆ ಎಂದು ಹೇಳುವ ಪಾದ ಅಷ್ಟು ಸರಿಯಾಗಿ ಕಾಣುತ್ತಾ ಇಲ್ಲ. ಇದನ್ನು ಬೇಕಾದರೆ 10,000 ರೂಪಾಯಿಗಳವರೆಗೆ ಹೆಚ್ಚಿಸಬಹುದು. ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಮನೆಗೆ ಬಂದರೆ ಕಾಫಿ ತಿಂಡಿ ರುಚಿಸುವುದಿಲ್ಲ, ಆದ್ದರಿಂದ ಎಲ್ಲರೂ ಹೋಟಲಿಗೆ ಹೋಗುತ್ತಾರೆ ಎಂದು ಹೇಳಿದರು. ಅಷ್ಟೇ ಅಲ್ಲ, ಗೌರವಸ್ಥರಾಗಿರುವ ಎಷ್ಟೋ ಹಳ್ಳಿಯ ಜನರು ಪಟ್ಟಣಗಳಿಗೆ ಬಂದು ಹೋಟೇಲುಗಳಲ್ಲಿ ರೂಮು ಬಾಡಿಗೆ ತೆಗೆದುಕೊಂಡು ಸಂಸಾರ ಸಮೇತ ಇದ್ದು ಹೋಗುವುದು ಕಷ್ಟವಾಗಿದೆ. ಈ ಸಮಾಚಾರ ಪತ್ರಿಕೆಗಳಲ್ಲಿ ಸಹ ಪ್ರಕಟವಾಗಿದೆ. ಅನುಮಾನದಿಂದ ಸಂಸಾರ ಸಮೇತವಾಗಿ ಆ ರೀತಿ ಹಳ್ಳಿಯವರು ಹೋಟೇಲುಗಳಿಗೆ ಬಂದು ತಂಗಿದ್ದಾಗ ಪೋಲೀಸಿನವರು ಯಾರನ್ನೋ ಕರೆದುಕೊಂಡು ಬಂದಿದ್ದಾರೆಂದು ಗಲಾಟೆಮಾಡಿರುವ ಸಂದರ್ಭವೂ ಸಹ ಕಂಡುಬಂದಿದೆ. ಆದ್ದರಿಂದ ಈ ದೃಷ್ಟಿಯಿಂದಲೂ ಹೆಚ್ಚಿನ ತೆರಿಗೆಯ ಹೊರೆಯನ್ನು ಆದಷ್ಟು ಕಡಮೆಮಾಡುವುದು ಒಳ್ಳೆಯದು ಎಂದು ಹೇಳುವುದು ಸರಿಯಲ್ಲ. ಇದನ್ನೆಲ್ಲಾ ಸೆಲೆಕ್ಟ್ ಸಮಿತಿಯವರು ಪರಿಶೀಲಿಸಿ ಹೊಸ ತೆರಿಗೆ ಹಾಕದೆ, ಇರತಕ್ಕಂಥ ಮಸೂದೆಯನ್ನೇ ಸಾಧ್ಯವಾದ ಮಟ್ಟಿಗೆ ನ್ಯೂನತೆಗಳನ್ನು ಪರಿಹರಿಸಿ ಸಭೆಯ ಮುಂದೆ ತರುವುದು ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**Sri Kadidal MANJAPPA** (Minister for Revenue and Public Works).— Mr. Speaker, Sir, I followed the debate very carefully. Some Hon'ble Members spoke as though the Government are trying to levy a new tax which is not already in existence. Sir, Hon'ble

Member Sri Imam attacked the very foundation of the tax. He said that Government are not justified in levying this tax. He also said that during his regime he did not resort to such taxation though the then Government was called ' Irresponsible '. I would like to read a few lines from the Report sent by a Committee presided over by Sri Imam, the Committee that was constituted in the year 1946 to examine the question of prohibition. Sri Imam was the Chairman and the members were Sriyuts M. Navaneetham Naidu, S. Narayana Rao, J. B. Mallaradhya and M. Madiah was also a member of that Committee along with several others. In the Report, the Committee has recommended for the introduction of prohibition throughout the State gradually within a period of five years. As an alternative source of income, the Committee has suggested Sales Tax and sale of hotels just as we sell the excise articles. The relevant part I will bring to the notice of the House :

" Another feature of the hotel business in the State is that the bulk of it is in the hands of non-Mysoreans and much of the money that is earned goes out of the State. Highly insanitary conditions prevail in most of the hotels which are the source of many infectious diseases. The food prepared there is generally adulterated and injurious to health. It is understood that some hotel-keepers do not hesitate to pay any price in black-markets to get their requirements and that they are to no small extent responsible for the shortage and high prices of necessities such as milk and fuel. It is very doubtful if people get a proportionate return for the money they spend in the hotels. The Committee are of the opinion that the right of selling food should vest with Government. The Committee recommend to Government that the number of hotels for each city, town or village might be fixed and that they might be leased out either individually or by groups in the same way as the right of vending excisable articles in licensed shops is sold at present. Considering the very large number of hotels in the State and the number of people who visit them, the Committee feel that this method will be a fruitful source of revenue. The Committee anticipate that it will be possible to get from this source on a conservative estimate a revenue of Rs. 30 lakhs per year, assuming an average.....etc."

Then, Sir, the relevant portion regarding sales tax is like this :

" The Committee next recommend the levy of a General Sales Tax, the incidence of which is widely distributed and no disproportionate or heavy burden is thrown on any section of the community."

These are the relevant portions of the report which I have placed before the Hon'ble House. Sir, Sri Imam is not here. Hon'ble Members expect the Ministers to be here and to be attentive when they speak. But Hon'ble Members who criticise the Government very bitterly will not be present at the time of reply.

Sri L. SIDDAPPA.—He is unavoidably absent. I will duly convey it to him, Sir. (*Laughter*)

Sri Kadidal MANJAPPA.—In fairness they must listen to the speech of the Ministers. Sir, the Sales Tax is in force in 18 States in India. In some States the tax is levied at single point and in some States it is levied at multi-point. Sri Imam and some other members said that we should levy sales tax at a single point; otherwise, we should not levy it at all. Sir, he has not correctly understood the difference between the multi-point and single point. Single point may be levied at first stage or the last stage. The merchant class will be rid of the worry and inconvenience if it is levied at the source, that is, first stage. But, levying at the last stage is as good as levying at multi-point. There is nothing to choose between the two. Only thing is, we must try to minimise the defects and the harassments.

(SRI KADIDAL MANJAPPA.)

Sir, criticism was concentrated round a few commodities and provisions relating to commission agents and to seizure and inspections. I do not see there is anything wrong with the Bill except some debatable provisions, namely, the provisions relating to the seizure and inspection and search and levy on hotel and textile. Apart from these debatable items, I do not see there is anything wrong with the Bill. Sir, some Hon'ble Member spoke as though the Government have committed a grave criminal act. They have defended the merchants and also the hotel-owners. I wish they had defended the State with the same vehemence. We all represent the entire State. I agree that all the dealers should be dealt with fairly and there should be no harassment, and taxation should not be heavy on any class of citizen. But, at the same time, they must consider the interest of the State also.

Sir, the first point about which a lot of criticism was levelled was in relation to levy in respect of hotels. In spite of my conceding at the outset that Government are satisfied that the proposed levy in respect of hotels needs reconsideration and in spite of my telling that there is an amendment proposed by the Hon'ble the Chief Minister, there was bitter criticism. Sir, many a time, not only on the floor of this House but elsewhere people have suggested that it is possible to secure more income for the State by taxing hotels. There was a suggestion that we should levy a sort of licence fee. There was also a suggestion that these hotels should be sold.

Sri S. GOPALA GOWDA.—Nationalise.

Sri Kadidal MANJAPPA.—That we will consider later on. A Committee was constituted by Government and they have sent up recommendations. We thought by enhancement of sales tax in the case of hotels we can secure the same object which we could have secured by levying either licence fee or by selling the right to run the hotels. Therefore, the Committee thought that in the case of hotels the rates should be enhanced. No doubt Government have proposed to levy ten per cent according to the Bill just placed before the House. I have already conceded that the provision requires to be amended. I do not propose to spend much time over that question.

Sir, the next point of which much was made, was the definition of the dealer. My Hon'ble friend Sri T. Mariappa has said that all commission agents are sought to be brought under this definition. It is true that all commission agents under this definition, are included into the category of dealers. But in section 9 there is provision for those commission agents to obtain licence through competent authorities. If they obtain licences, they will not be liable to pay sales tax as in the case of ordinary dealers. Why we thought of including commission agent in the category of dealers is that many of the commission agents were neither taking licences under section 9 nor paying sales tax as in the case of an ordinary dealer. If they obtain licence, they can pay some fee and be rid of the bother. Without obtaining licences they were pleading that there were not dealers and therefore they were not liable for taxation. To provide for such a contingency, the Committee thought that this definition was necessary.

Then, Sir, some Hon'ble Members felt that the exemption limit is too low and that many petty merchants will be liable to pay tax hereafter. In Assam the exemption limit is Rs. 7,500. In Hyderabad, our neighbouring State, it is Rs. 7,500.

7 P.M,

In Andhra State, it is 7,500 and I believe in Assam it is Rs. 7,500 for single point. In Hyderabad for multi-point it is Rs. 5,500. In Bombay it is Rs. 5,000 in the case of special tax and Rs. 30,000 in the case of general tax. Of course Bombay is a big commercial city.

Sri K. PATTABHIRAMAN.—Bombay is not in the Papers.

Sri Kadidal MANJAPPA.—Here the tax on those who have a turnover of

more than Rs. 7,500 and less than Rs. 10,000 is Rs. 25 a year. What was he paying before ?

**Sri A. BHEEMAPPA NAIK.**—Articles exempted under single point are deducted from the turnover. In no other State such a thing has been done now.

**Sri S. SRINIVASA IYENGAR.**—So two people are defending now ! Why was it lowered ?

**Sri A. BHEEMAPPA NAIK.**—That is the reason.

**Sri Kadidal MANJAPPA.**—We cannot have both ways. We must secure the income as well as minimise the hardship.

Then, Sir, much was made of the clause relating to prosecutions. Though that provision is not here, it is in the original Act itself. Prosecution for non-payment of tax is in vogue from the year 1948.

**Sri K. PATTABHIRAMAN.**—Has it become sacrosanct on account of that ?

**Sri Kadidal MANJAPPA.**—Not at all. There is such a provision to prosecute those persons who default paying tax.

**Sri S. SRINIVASA IYENGAR.**—But when you levy interest ?

**Sri Kadidal MANJAPPA.**—Perhaps the levy of interest is solely with the idea of avoiding prosecutions.

**Sri K. PATTABHIRAMAN.**—May I seek a little clarification at the hands of the Hon'ble Minister ? You have got in the original Act that the amount due shall be recovered as arrear of land revenue. What is the object of recovering it as arrear of land revenue if you want to work out the Act by prosecution ? Why do you want to introduce recovery of the amount as arrear of land revenue if you want to prosecute the person ?

**Sri Kadidal MANJAPPA.**—In the case of land revenue, it is to collect, as somebody remarked, from villagers who are not vociferous. That is the first point. Land revenue is a paramount charge on the land. When he is in default in making land revenue, the land is forfeited to Government and it is sold. But here there is no land. My friend Sri A. Bheemappa Naik has given interesting stories of evasion of payment of tax. Anybody can open a shop, collect the tax, evade payment and one fine morning get away from Mysore State.

**Sri A. BHEEMAPPA NAIK.**—Such cases are in hundreds.

**Sri K. PATTABHIRAMAN.**—Those cases have not been met in your Bill ?

**Sri Kadidal MANJAPPA.**—Much is made of the harassment on the part of officers. Let us take the other aspect of the case. I do not want to make any sweeping remark. Many merchants are honest. But in how many cases merchants levied and collected sales-tax and evaded payment of the tax to Government. In how many cases people have not maintained two sets of accounts ? My own client (*laughter*) for whom I was appearing before the Deputy Commissioner of Sales-tax was pleading before me that the assessment was unjust and arbitrary. That appeal case was pending when I became a Minister. After I became a Minister and I took charge of the Sales-tax Department portfolio, he came to me and confessed that he had maintained two sets of accounts, one to be shown to the sales tax authorities. (*A Voice*: Therefore ?) It is not one sided. I concede that there should not be any harassment. I concede that they should be treated fairly. But at the same time we must try to safeguard the interests of the State.

**Sri S. SRINIVASA IYENGAR.**—Do you know the reasons why he maintained two sets of accounts ? It is a piece of information to you, because of harassment.

**Mr. SPEAKER.**—This is the second time he refers to the subject as it is. I mean on a previous occasion also he said that.

**Sri Kadidal MANJAPPA.**—The rate of tax calculated on the basis of slab system, I am sure, will not exceed 3 pies. That is the calculation. It works out to 1.64, 1.44, 1.5 pies—not even 2 pies. Formerly they were paying at the rate of 3 pies.

**Sri S. SRINIVASA IYENGAR.**—That is true.

Sri Kadidal MANJAPPA.—One other aspect we will have to consider. Let us consider the subject dispassionately. No doubt ultimately the tax falls on the consumer. But no consumer makes any noise. All of them pay the sales-tax. Then, who is making the noise now ?

Sri S. SRINIVASA IYENGAR.—Their representatives.

Sri Kadidal MANJAPPA.—Whatever it be, we represent the consumers and the dealers also.

Sri Imam and a few other friends referred to the provision in the Essential Goods Act and said that we are bound by that Act and that there was no justification to withhold exempting these articles mentioned in that Act. My friend Sri M. V. Rama Rao has already answered him. That Act clearly says that it is not applicable to such articles which are already subject to sales tax.

Something has been said about delegated legislation. At the request of the merchant class we propose to include in the schedule such other articles which may be conveniently subjected to single point levy. We may find hereafter that some articles would be included in the list at every stage. Is it very difficult to approach the Legislature for amending the Bill ? In the interests of the dealer himself we have proposed that the Government should have such a power. (*A Voice*: Resort to ordinance.) Even if we resort to ordinance..... (*Interruption.*)

Sri A. BHEEMAPPA NAIK.—Even at the time of recovery of sales tax, the contractors or auctioners say that the law does not apply to liquor.

Sri Kadidal MANJAPPA.—Some members have argued that beedis should be exempted from sales-tax. We are getting an income of Rs. 2½ lakhs. Three-fourths of it is derived from outsiders. Therefore there is no need to exempt beedis.

Some Hon'ble Members have referred to the levy in regard to agarbattis. I have no objection to reduce the rate of tax.

Coming to textiles, in Madras there is the multi-point levy at the rate of 3 pies on both power-loom and mill goods. Nowhere distinction has been made between power-loom and mill textiles. Even in the Central Act no such distinction has been made. I am referring to the Essential Goods Act. In computing the Madras Government propose to levy tax at the rate of one anna three pies at the first stage retaining the multi-point levy. The total tax comes to nearly 2 annas in the rupee. In Bombay it comes to nearly one anna per rupee. In Travancore-Cochin there is multi-point levy at the rate of 3 pies in the rupee. In some State even the hand-loom cloth is subject to sales-tax. But here we propose to complety exempt hand-loom goods from the levy of sales-tax. If we enhance the rate in respect of mill and hand-loom goods, we may be able to help hand-loom industry to some extent. But.....

Sri S. SRINIVASA IYENGAR.—There is the surcharge of the Government of India also, is it not ?

Sri Kadidal MANJAPPA.—Yes. Many Hon'ble Members have spoken in favour of reducing the rate. I feel that some modification in the rate is necessary.

A MEMBER.—What about registration ?

Sri Kadidal MANJAPPA.—The committee have recommended that all dealers irrespective of their turnover should get themselves registered and pay an annual fee of Rs. 6. But the departmental officers say that it is not workable and that it is very difficult to collect the licence fee from all the dealers in the State. They are of the view that they have to maintain a big establishment to collect this registration fees.

Sri S. SRINIVASA IYENGAR.—How are they now collecting the fee ?

Sri Kadidal MANJAPPA.—The number is limited and so the sales-tax officers and the departmental officers are collecting.

Sri A. BHEEMAPPA NAIK.—They remit it to the treasury with challan; otherwise, they are not allowed to sell. Without registration he is not allowed.

Sri Kadidal MANJAPPA.—One or two members have argued as though we are enhancing the tax. We are not thinking of enhancing the tax. We

expect that the total revenue will not exceed the amount that we are getting now.

Mr. SPEAKER.—Anyhow you propose to refer this Bill to a select committee.

Sri Kadidal MANJAPPA.—Some Hon'ble Members have referred to the language for the maintenance of accounts. We cannot have a big establishment to check the accounts of these dealers who maintain the accounts in all languages. Kannada is the provincial language, Hindi is the national language and English is the international language. They are required to keep the accounts in any one of these languages.

Sri K. Pattabhiraman suggested that we may rely upon the attested version of the translation of the accounts. It is as good as maintaining accounts in a different language. A man either a *marwari* or a *multani* who comes to Mysore State with the object of earning can afford to maintain a Kannada-knowing clerk and get the account written in Kannada language or in any other language.

Sir, finally, I must say that except for two or three debatable points, there is nothing to complain against the Bill. It is more beneficial from the point of view of the merchants.

With these observations, I request the Hon'ble Members to accord their approval to refer this Bill to the select committee later on.

Mr. SPEAKER.—The question is:

"That the Mysore Sales Tax (Amendment) Bill, 1954, be taken into consideration.

*The motion was adopted.*

*Motion to refer.*

Sri Kadidal MANJAPPA.—Sir, I beg to move:

"That the Mysore Sales Tax (Amendment) Bill, 1954, be referred to the select committee consisting of the following Members:

Sri B. Madhavachar, Sri B. C. Nanjundaiya, Sri T. Hanumaiya, Sri G. A. Thimmappa Gowda, Sri B. P. Nagaraja Murthy, Sri D. Devaraja Urs, Sri A. Bheemappa Naik, Sri S. Srinivasa Iyengar, Sri T. N. Mudalagiri Gowda, Sri T. Mariappa, Sri M. Linganna, Sri B. Y. Neele Gowda, Sri V. M. Mascarenhas with direction to report before 31st March 1954."

Mr. SPEAKER.—The question is:

"That the Mysore Sales Tax (Amendment) Bill, 1954, be referred to the select committee consisting of the following Members:

Sri B. Madhavachar, Sri B. C. Nanjundaiya, Sri T. Hanumaiya, Sri G. A. Thimmappa Gowda, Sri B. P. Nagaraja Murthy, Sri D. Devaraja Urs, Sri A. Bheemappa Naik, Sri S. Srinivasa Iyengar, Sri T. N. Mudalagiri Gowda, Sri T. Mariappa, Sri M. Linganna, Sri B. Y. Neele Gowda, Sri V. M. Mascarenhas with direction to report before 31st March 1954."

*The motion was adopted.*

Mr. SPEAKER.—Under Rule 56 of the Rules of Procedure and Conduct of Business in the Mysore Legislative Assembly, the Member in charge of the Bill and also the Minister for Law shall be the Members of this Select Committee.

Under Rule 57, I appoint the Minister for Law as Chairman of the Committee.